ಸಂಪುಟ 01 | ಸಂಚಿಕೆ 104 | ಸೋಮವಾರ 02 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಆನಂದ್‌ಜಿ ವಿರ್ಜಿ ಷಾ ರವರ ಜನ್ಮ ದಿನ**

ಪ್ರಸಿದ್ಧ ಸಂಗೀತ ಸಂಯೋಜಕ ಜೋಡಿ ಕಲ್ಯಾಣ್‌ಜಿ-ಆನಂದಜಿಯವರ ಭಾಗವಾಗಿರುವ ಆನಂದ್‌ಜಿ ವಿರ್ಜಿ ಷಾ ಅವರು ಮಾರ್ಚ್ 2, 1933 ರಂದು ಜನಿಸಿದರು. ಗುಜರಾತ್‌ನ ಕುಂದ್ರೋಡಿಯಲ್ಲಿ ಜನಿಸಿದ ಇವರುಭಾರತೀಯ ಚಲನಚಿತ್ರ ಸಂಗೀತದಲ್ಲಿ ತಮ್ಮ ಸಹೋದರ ಕಲ್ಯಾಣ್‌ಜಿ ಅವರೊಂದಿಗೆ ದಶಕಗಳ ಕಾಲ ಸ್ಮರಣೀಯ ಗೀತೆಗಳನ್ನು ನೀಡಿದ ಪ್ರಸಿದ್ಧ ನಿರ್ದೇಶಕರಾಗಿದ್ದಾರೆ

**2) ಸರೋಜಿನಿ ನಾಯ್ಡು ರವರ ಪುಣ್ಯ ಸ್ಮರಣೆ**

ಭಾರತದ ಶ್ರೇಷ್ಠ ಕವಿ: ಸರೋಜಿನಿ ನಾಯ್ಡು "ಭಾರತದ ನೈಟಿಂಗೇಲ್" ಸರೋಜಿನಿ ನಾಯ್ಡು ಮಾರ್ಚ್ 2, 1949 ರಂದು ತಮ್ಮ 68 ನೇ ವಯಸ್ಸಿನಲ್ಲಿ ಲಕ್ನೋದಲ್ಲಿ ನಿಧನರಾದರು. ಪ್ರಮುಖ ಸ್ವಾತಂತ್ರ್ಯ ಹೋರಾಟಗಾರ್ತಿ, ಕವಿ ಮತ್ತು ಭಾರತೀಯ ರಾಜ್ಯವೊಂದರ (ಯುನೈಟೆಡ್ ಪ್ರಾಂತ್ಯಗಳು) ಮೊದಲ ಮಹಿಳಾ ಗವರ್ನರ್ ಆಗಿ, ಅವರ ಪುಣ್ಯತಿಥಿಯನ್ನು ವಾರ್ಷಿಕವಾಗಿ ಮಾರ್ಚ್ 2 ರಂದು ಸ್ವಾತಂತ್ರ್ಯ ಚಳುವಳಿ ಮತ್ತು ಸಾಹಿತ್ಯಕ್ಕೆ ನೀಡಿದ ಕೊಡುಗೆಗಳನ್ನು ಗೌರವಿಸಲು ಸ್ಮರಿಸಲಾಗುತ್ತದೆ.

## ಸುಭಾಷಿತ

ಅರ್ಥವಿಲ್ಲದ ಪ್ರಶ್ನೆಗೆ ಸುಮ್ಮನಿರುವುದೇ ಉತ್ತರ.

ಕುವೆಂಪು.

ನೈಜ್ಯ ದೇಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಭಾರತ ಶಾಂತಿ ಬಯಸುವ ದೇಶ, ಯುದ್ಧಗಳು ಸರಿಯಲ್ಲ: ಡಿಸಿಎಂ



ಬೆಂಗಳೂರು: ಮೂವರು ಶಾಸಕರು ಸೇರಿದಂತೆ ಸಾವಿರಾರು ಮಂದಿ ದುಬೈನಲ್ಲಿ ಸಿಲುಕಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕ, ಕೇರಳ ಸೇರಿದಂತೆ ದಕ್ಷಿಣ ಭಾರತ ಲಕ್ಷಾಂತರ ಮಂದಿ ದುಬೈನಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಇರಾನ್-ಇಸ್ರೇಲ್ ಯುದ್ಧದಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರುಗಳನ್ನು ಸುರಕ್ಷಿತವಾಗಿ ಕರೆತರಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಎಂದರು.

ವಿದೇಶದಲ್ಲಿ ಸಿಲುಕಿರುವವರನ್ನು ಕೇಂದ್ರ ಸರ್ಕಾರ ರಕ್ಷಣೆ ಮಾಡಬೇಕಿದೆ. ರಾಜ್ಯ ಸರ್ಕಾರ ಅಗತ್ಯ ಸಹಕಾರ ನೀಡಲಿದೆ. ಕರ್ನಾಟಕದ ಶಾಸಕ ಎ.ಸಿ. ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯ ಎಸ್. ಎಲ್.ಭೋಜೇಗೌಡ, ಶಾಸಕ ಭರತ್‌ರೆಡ್ಡಿ ಅವರ ಕುಟುಂಬದ ಸದಸ್ಯರು ದುಬೈನಲ್ಲಿ ಸಿಲುಕಿದ್ದಾರೆ ಎಂದು ಮಾಹಿತಿ ಇದೆ. ಯಾ-ರಿಗೂ ಆತಂಕ ಬೇಡ, ಎಲ್ಲರನ್ನೂ ಸುರಕ್ಷಿತವಾಗಿ ಕರೆತರಲು ಪ್ರಯತ್ನಿಸುತ್ತೇವೆ ಎಂದರು. ಭಾರತ ಶಾಂತಿ ಬಯಸುವ ದೇಶ. ಈ ರೀತಿಯ ಯುದ್ಧಗಳು ಸರಿಯಲ್ಲ, ಅದರಲ್ಲೂ ಶಾಲೆಯ ಮೇಲೆ ದಾಳಿ ನಡೆಸಿ, 70 ಮಕ್ಕಳನ್ನು ಹತ್ಯೆ ಮಾಡಿರುವುದು ಖಂಡನೀಯ. ಟಿವಿಗಳಲ್ಲಿ ದಾಳಿಯ ದೃಶ್ಯಗಳನ್ನು ನೋಡಿದರೆ, ಗಾಬರಿಯಾಗುತ್ತಿದೆ. ಮಿಸೈಲ್‌ಗಳು ಡ್ರೋನ್‌ಗಳ ಮೂಲಕ ಏರ್‌ಸ್ಟ್ರೈಕ್ ನಡೆಸಲಾಗುತ್ತಿದೆ. ಇದು ಆತಂಕದ ವಾತಾವರಣ ಎಂದು ಹೇಳಿದರು. ಸಂಕಷ್ಟದಲ್ಲಿ ಸಿಲುಕಿದವರಿಗೆ ಕೇಂದ್ರ ಸರ್ಕಾರ ಸಹಾಯವಾಣಿ ಆರಂಭಿಸಿದೆ. ರಾಜ್ಯ ಸರ್ಕಾರ ಪ್ರತ್ಯೇಕವಾದ ಸಹಾಯವಾಣಿ ತೆರೆಯುವುದು ಸೂಕ್ತವಲ್ಲ. ವಿದೇಶದಲ್ಲಿರುವ ಕನ್ನಡದ ಸಂಘಟನೆಗಳು ಭಾರತೀಯರ ನೆರವಿಗೆ ಧಾವಿಸಬೇಕು ಎಂದು ಅವರು ಮನವಿ ಮಾಡಿದರು. ಕೇಂದ್ರ ಸರ್ಕಾರ ವಿದೇಶದಲ್ಲಿರುವವ-ರಿಗೆ ಆತಸ್ಥೈರ್ಯ ತುಂಬುವ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಡ ಹೇರುವುದಾಗಿ ಡಿ.ಕೆ.ಶಿವಕುಮಾರ್ ಹೇಳಿದರು.

4ನೇ ಪುಟಕ್ಕೆ

# ಅಪಘಾತ :ತಮ್ಮ ಸರ್ಕಾರಿ ವಾಹದಲ್ಲಿಯೇ ಗಾಯಾಳುವಿಗೆ ಆಸ್ಪತ್ರೆಗೆ ಕಳುಹಿಸಿಕೊಟ್ಟು ಮಾನವೀಯತೆ ಮೆರೆದ ಶಾಸಕ ಬಸನಗೌಡ ತುರುವಿಹಾಳ

ನೈಜ್ಯ ದೆಸೆ ನ್ಯೂಸ್



ಮಸ್ಕಿ: ಸಿಂಧನೂರು- ಕುಷ್ಟಗಿ ರಸ್ತೆ ಗುಂಜಳ್ಳಿ ಗ್ರಾಮದ ಸಮೀಪದ ರಸ್ತೆಯಲ್ಲಿ ಭಾನುವಾರ ವಾಹನಗಳ ನಡುವೆ ಸಂಭವಿಸಿದ್ದ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡವರನ್ನು ಖಾದಿ ಗ್ರಾಮದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್.ಬಸನಗೌಡ ತುರವಿಹಾಳ ಆಸ್ಪತ್ರೆಗೆ ದಾಖಲಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಅಪಘಾತದಲ್ಲಿ ವೆಂಕಟೇಶ್ ಹಾಗೂ ರತ್ನಮ್ಮ ಎಂಬುವವತಿಗೆ ತೀವ್ರ ಗಾಯಗಳಾಗಿ ನರಳಾಡುತ್ತಿದ್ದರು. ಇದೇ ಮಾರ್ಗವಾಗಿ ತೆರಳುತ್ತಿದ್ದ ಶಾಸಕರು ತಕ್ಷಣ ತಮ್ಮ ಕಾರು ನಿಲ್ಲಿಸಿ ಆ?ಯಂಬುಲೆನ್ಸ್ ಕರೆ ಮಾಡಿದ್ದಾರೆ. ಆ?ಯಂಬುಲೆನ್ಸ್ ಲಭ್ಯವಿಲ್ಲ ಬರಲು ತಡವಾಗುತ್ತದೆ ಎಂದು ತಿಳಿದು ಶಾಸಕರು ತಮ್ಮ ಸರ್ಕಾರಿ ಕಾರಿನಲ್ಲೇ ಅಪಘಾತದಲ್ಲಿ ಗಾಯಗೊಂಡ ಗಾಯಳುವಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು.

ನಂತರ ಸ್ಥಳಕ್ಕೆ ಆಂಬುಲೆನ್ಸ್ ಬಂದು ರತ್ನಮ್ಮ ಎಂಬ ಗಾಯಳು ಅವರನ್ನು ಚಿಕಿತ್ಸೆ ಗೆ ಕರೆದುಕೊಂಡು ತೆರಳಿದರು. ನಂತರ ಶಾಸಕ ಆರ್. ಬಸನಗೌಡ ಅವರು ವೈದಾಧಿಕಾ-ರಿಗಳಿಗೆ ಕರೆ ಮಾಡಿ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದರು. ಶಾಸಕರ ಮಾನವೀಯ ಕಾರ್ಯಕ್ಕೆ ಗಾಯಾಳುಗಳು ಮತ್ತು ಸ್ಥಳದಲ್ಲಿದ್ದ ಸಾರ್ವಜನಿಕರು ಧನ್ಯವಾದ ಅರ್ಪಿಸಿದರು.

# ಮಸ್ಕಿಯಲ್ಲಿ ರೇಣುಕಾಚಾರ್ಯರ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್



ಮಸ್ಕಿ: ಪಟ್ಟಣದ ತಹಸೀಲ್ದಾರ್ ಕಾರ್ಯಾಲಯದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ತಾಲೂಕಾಡಳಿತದಿಂದ ಭಾನುವಾರ ಆಚರಿಸಲಾಯಿತು. ತಹಸೀಲ್ದಾರ್ ಮಂಜುನಾಥ ಭೋಗಾವತಿಯವರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ನಂತರ ಮಾಲಾರ್ಪಣೆ ಮಾಡುವ ಮೂಲಕ ಜಯಂತಿಯನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಸರ್ವೆ ಇಲಾಖೆ ಯ ಬುಜ್ಜಪ್ಪ, ಬಸವರಾಜಸ್ವಾಮಿ ಹಸಮಕಲ್, ಘನಮಠದಯ್ಯ, ಬರಿಬಸಯ್ಯಸ್ವಾಮಿ, ಗಂಗಾಧರ, ವಿರುಪಾಕ್ಷಯ್ಯಸ್ವಾಮಿ ಅಂತರಗಂಗಿ ಸೇ-ರಿದಂತೆ ಸಮಾಜದ ಅನೇಕರಿದ್ದರು.

ವಿವಿಧೆಡೆ: ತಾಲೂಕು ಪಂಚಾಯಿತಿ, ಪುರಸಭೆ ಕಾರ್ಯಾಲಯ, ನೀರಾವರಿ ಇಲಾಖೆ, ನಗರ ಯೋಜನಾ ಪ್ರಾಧಿಕಾರ ಕಛೇರಿ, ರೈತ ಸಂಪರ್ಕ ಕೇಂದ್ರ, ಸರ್ವೆ ಮತ್ತು ಭೂ ದಾಖಲೆ ಇಲಾಖೆ, ಮಸ್ಕಿ ನಾಲಾ ಯೋಜನಾ ಕಛೇರಿ, ಶಾಸಕರ ಕಾರ್ಯಾಲಯ ಸೇರಿದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷ ಕಾರ್ಯಾಲಯಗಳಲ್ಲಿ ರೇಣುಕಾಚಾರ್ಯರ ಜಯಂತಿಯನ್ನು ಆಚರಿಸಲಾಯಿತು.

# ಮುದಗಲ್ ಸಹನಾ ಶಾಲೆಯಲ್ಲಿ ಸಂಭ್ರಮದ "ರಾಷ್ಟ್ರೀಯ ವಿಜ್ಞಾನ ದಿನಾಚರಣೆ".

ನೈಜ್ಯ ದೆಸೆ ನ್ಯೂಸ್



ಮುದಗಲ್: ಸ್ಥಳೀಯ ಸಹನಾ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಮೂಡಿಸುವಲ್ಲಿ ಯಶಸ್ವಿಯಾಯಿತು.

ಮೊದಲನೆಯದಾಗಿ ಶಾಲಾ ಶಿಕ್ಷಕ- ಶಿಕ್ಷಕಿಯರು ಮತ್ತು ವಿದ್ಯಾರ್ಥಿಗಳಿಂದ ಪ್ರತಿಜ್ಞಾವಿಧಿ ಭೋದಿಸಲಾಯಿತು. ನಂತರ ಶಾಲೆಯ ಮುಖ್ಯೋಪಾಧ್ಯಾಯ ಆದ-'ಪ್ಪ ಅವರು ಮಾತನಾಡಿ, "ವಿಜ್ಞಾನವು ಕೇವಲ ಪಠ್ಯಪುಸ್ತಕಕ್ಕೆ ಸೀಮಿತವಾಗದೆ, ದೈನಂದಿನ ಜೀವನದ ಭಾಗವಾಗಬೇಕು," ಎಂದು ಕರೆ ನೀಡಿದರು. ಇಂದಿನ ವಿದ್ಯಾರ್ಥಿಗಳೇ ನಾಳೆಯ ವಿಜ್ಞಾನಿಗಳು. ಪ್ರಶ್ನಿಸುವ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಹೊಸ ಆವಿಷ್ಕಾರಗಳು ಸಾಧ್ಯ." ಎಂದು ಶಾಲೆಯ ಶಿಕ್ಷಕಿಯಾದ ಪ್ರಿಯಾಂಕ ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕಿಂ-ಯರಾದ ಆಯೇಶಾ ಬಾನು, ಕವಿತಾ, ಹೀನ ಬೇಗಂ, , ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಶಾಲೆಯ ಶಿಕ್ಷಕಿಯಾದ ಅಸ್ಮ ಬೇಗಂ ನಿರೂಪಿಸಿದರು.

# ರೇಣುಕಾಚಾರ್ಯರ ತತ್ವಾದರ್ಶಗಳ ಪಾಲನೆ ಅಗತ್ಯ: ದಮ್ಮೂರಮಠ

ನೈಜ್ಯ ದೆಸೆ ನ್ಯೂಸ್





ತಾಳಿಕೋಟಿ: ಜಗದ್ಗುರು ಶ್ರೀ ರೇಣುಕಾಚಾರ್ಯರು ಇಡೀ ಮನುಕುಲದ ಏಳಿಗೆ ಬಯಸಿದವರು ಅವರ ಅನುಯಾಯಿಗಳಾದ ನಾವು ಕೇವಲ ಅವರ ಜಯಂತಿ ಆಚರಿಸಿದರೆ ಸಾಲದು ಅವರ ಬದುಕಿನ ಆದರ್ಶಗಳನ್ನು ಅನುದಿನವೂ ಅನುಸರಿಸುವ ಅಗತ್ಯ ಇದೆ ಎಂದು ಮುದ್ದೇಬಿಹಾಳ ಕ್ಷೇತ್ರ ಸಮನ್ವಯಾಧಿಕಾರಿ ಆರ್ ಬಿ ದಮ್ಮೂರಮಠ ಹೇಳಿದರು. ಭಾನುವಾರ ಪಟ್ಟಣದ ಎಪಿಎಂಸಿ ವರ್ತಕರ ಸಭಾಭವನದಲ್ಲಿ ಜಂಗಮ ಸಮಾಜದಿಂದ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡ ಧರ್ಮಸಭೆಯಲ್ಲಿ ಅವರು ಮಾತನಾಡಿದರು.

ಇವತ್ತು ರಾಜ್ಯದಲ್ಲಿ ಶೇ.2 ರಷ್ಟು ಜನಸಂಖ್ಯೆ ಹೊಂದಿರುವ ಜಂಗಮ ಸಮಾಜ ಆರ್ಥಿಕ ಸಾಮಾಜಿಕ ರಾಜಕೀಯ ಹಾಗೂ ಶೈಕ್ಷಣಿಕವಾಗಿ ಅತಿ ಹಿಂದುಳಿದರುವ ಸಮಾಜವಾಗಿದೆ ಎಂದು ವರದಿಗಳು ಹೇಳುತ್ತವೆ. ಇದರ ಕುರಿತು ನಾವೆಲ್ಲರೂ ಚಿಂತಿಸಿ ಎಚ್ಚೆತ್ತುಕೊಳ್ಳುವ ಅಗತ್ಯವಿದೆ. ಸಮಾಜದ ಒಗ್ಗಟ್ಟನ್ನು ಕಾಪಾಡಿಕೊಂಡು ದುರ್ಬಲರನ್ನು ಮೇಲೆತ್ತುವ ಕೆಲಸವನ್ನು ಎಲ್ಲರೂ ಕೂಡಿಕೊಂಡು ಮಾಡಬೇಕಾಗಿದೆ ಅಂತಹ ಒಂದು ಆತ್ಮಾವಲೋಕನಕ್ಕೆ ಈ ಜಯಂತಿ ಕಾರ್ಯಕ್ರಮ ಪ್ರೇರಣೆಯಾಗಲಿ ಎಂದರು. ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್ ಎಸ್ ಪಾಟೀಲ(ಕೂಚಬಾಳ), ಮಾತನಾಡಿ ಜಂಗಮ ಸಮಾಜ ಗುರುವಿನ ಸ್ಥಾನದಲ್ಲಿರುವ ಸಮಾಜ, ಅದರ ಸಂಖ್ಯೆ ಕಡಿಮೆ ಇದ್ದರೂ ಸಮಾಜದಲ್ಲಿ ಶ್ರೇಷ್ಠ ಗೌರವವನ್ನು ಹೊಂದಿದ್ದು ಎಲ್ಲ ಸಮಾಜಗಳಿಗೆ ಸಂಸ್ಕಾರ ಸಂಸ್ಕೃತಿಯನ್ನು ಕಲಿಸಿಕೊಡುವ ಸಮಾಜವಾಗಿದೆ.

ಇವತ್ತು ರಾಜಕೀಯ ವ್ಯವಸ್ಥೆ ಹಾಳಾಗಿ ಹೋಗಿದೆ ಇದನ್ನು ಸರಿದಾರಿಗೆ ತರಲು ಎಲ್ಲ ಪೂಜ್ಯರು ಒಗ್ಗೂಡಿ ಕೆಲಸ ಮಾಡಬೇಕೆಂದು ಕೇಳಿಕೊಂಡರು. ಕಲ್ಕೇರಿ ಮಡಿವಾಳೇಶ್ವರ ಶ್ರೀಗಳು ಹಾಗೂ ಶ್ರೀ ಸಂಘಮಾರ್ಯ ವಿದ್ಯಾ ಸಂಸ್ಥೆಯ ಅಧ್ಯಕ್ಷ ಎಚ್‌ಎಸ್ ಪಾಟೀಲ ಮಾತನಾಡಿದರು. ಇದೇ ಸಂದರ್ಭದಲ್ಲಿ ಕಳೆದ ಬಾರಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಕೊಡೆಕಲ್ಲದ ಪೂಜ್ಯ ಶಿವಕುಮಾರ ಮಹಾಸ್ವಾಮಿಗಳು ಜಂಗಮ ಸಮಾಜದ ಗೌರವ ಅಧ್ಯಕ್ಷರಾದ ರಾಮಲಿಂಗಯ್ಯ ಮಹಾಸ್ವಾಮಿಗಳು ಸಮಾಜದ ಒಗ್ಗಟ್ಟು ಮತ್ತು ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ.

ಬೇಸಿಗೆ ರಜೆಯಲ್ಲಿ ಸಮಾಜದ ಮಕ್ಕಳಿಗೆ ಧರ್ಮ ಸಂಸ್ಕಾರ ಕಲಿಸಿಕೊಡುವ ವಿಶೇಷ ತರಬೇತಿ ಶಿಬಿರ ತಮ್ಮ ಮಠದಲ್ಲಿ ಹಮ್ಮಿಕೊಂಡಿದ್ದಾರೆ ಇದಕ್ಕೆ ನಾವೆಲ್ಲರೂ ಸಹಕರಿಸೋಣ ಎಂದರು. ನಾವದಗಿ ಬ್ರಹನ್ಮಠದ ಷ.ಬ್ರ.ಶ್ರೀ ರಾಜ ಗುರು ರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು ಸಮಾರಂಭವನ್ನು ಉದ್ಘಾಟಿಸಿದರು.ಚಬನೂರ ಶ್ರೀ ರಾಮಲಿಂಗೇಶ್ವರ ಮಠದ ಪೂಜ್ಯ ರಾಮಲಿಂಗಯ್ಯ ಮಹಾಸ್ವಾಮಿಗಳು ಸಮ್ಮುಖ ವಹಿಸಿದ್ದರು. ಸಾಸನೂರ- ತುಂಬಗಿ ಹಿರೇಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಕಲಕೇರಿಯ ಸಿದ್ದರಾಮ ಶಿವಾಚಾರ್ಯರು,

ಬಲಶೆಟ್ಟಿಹಾಳದ ಸಿದ್ದಲಿಂಗ ದೇವರು, ಲೋಟಗೇರಿಯ ಡಾ.ಗುರುಮೂರ್ತಿ ದೇವರು, ಮುರಗೇಶ ವಿರಕ್ತಮಠ, ಕಾಶಿಬಾಯಿ ಅಮ್ಮನವರು ಸಾನಿಧ್ಯ ವಹಿಸಿದ್ದರು. ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರಕಲ್ಲ, ಶ್ರೀ ಗುರು ಹಿರೇಮಠ, ಪಂಚಾಚಾರ್ಯ ಸಹಕಾರಿ ಸಂಘದ ಅಧ್ಯಕ್ಷ ಮುತ್ತು ಜಹಗೀರದಾರ, ಸಮಾಜದ ಅಧ್ಯಕ್ಷ ಶರಣಯ್ಯ ಹಿರೇಮಠ, ಉಪಾಧ್ಯಕ್ಷ ಶಿವಲಿಂಗಯ್ಯ ಹಿರೇಮಠ, ಕಾರ್ಯದರ್ಶಿ ಈರಯ್ಯ ಹಿರೇಮಠ,ಸಂ.ಕಾ.ಗಜದಂಡಯ್ಯ ಹಿರೇಮಠ,ಸಮಾಜದ ಗಣ್ಯರು ಹಿರಿಯರು ಹಾಗೂ ಮಹಿಳೆಯರು ಇದ್ದರು. ಶಿಕ್ಷಕಿ ಸುವರ್ಣಾ ಗದುಗಿನಮಠ,ಡಾ.ಸೋಮಶೇಖರಯ್ಯ ಹಿರೇಮಠ ಹಾಗೂ ಶಿಕ್ಷಕ ರಾಜಶೇಖರ ಹಿರೇಮಠ ನಿರ್ವಹಿಸಿದರು. ಭವ್ಯ ಮೆರವಣಿಗೆ: ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಶ್ರೀ ಖಾಸ್ಗತೇಶ್ವರ ಮಠದಿಂದ ಜಂಗಮ ಸಮಾಜದ ತಾಲೂಕ ಗೌರವ ಅಧ್ಯಕ್ಷರಾದ ಪರಮ ಪೂಜ್ಯ ರಾಮಲಿಂಗಯ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಆರಂಭಗೊಂಡ ಜಗದ್ಗುರು ರೇಣುಕಾಚಾರ್ಯರ ಮೂರ್ತಿಯ ಭವ್ಯ ಮೆರವಣಿಗೆ ಸಕಲ ವಾದ್ಯ ಮೇಳಗಳೊಂದಿಗೆ ಮುಖ್ಯ ವೇದಿಕೆಗೆ ತಲುಪಿತು.

## ಸಾಹಿತ್ಯ ಸಿಂಚನ

ಭಾರತದ ಕೋಗಿಲೆ ನೀನು,
ಸ್ವಾತಂತ್ರ್ಯದ ಗಾನ ಹಾಡಿದ ವೀಣೆ ನೀನು?

ಮಧುರವಾದ ಮಾತಿನ ಮಂಜರಿ,
ದೇಶಭಕ್ತಿಯ ದೀಪ ಹೊತ್ತ ಬೆಳಕು ನೀನು?

ಕವನಗಳಲ್ಲಿ ಕನಸು ಬಿತ್ತಿದವಳು,
ಹೃದಯಗಳಲ್ಲಿ ಹೋರಾಟ ಹಚ್ಚಿದವಳು?

ಪೆನ್ನಿನಿಂದಲೇ ಪೋರಾಟ ಮಾಡಿದ,
ಪರಾಕ್ರಮದ ನಾರಿಯ ಪ್ರತಿಮೆಯವಳು?

ಸತ್ಯದ ಮಾರ್ಗದಲ್ಲಿ ಸಾಗಿದ ಸ್ತ್ರೀ,
ಸಹನಶೀಲತೆಯ ಸಿಂಹಾಸನ ನೀ?
ಬ್ರಿಟಿಷರ ಬಂಧನದಲ್ಲೂ ನಗುತ,
ಭಾರತಮಾತೆಗೆ ಅಂಕಿತವಾದ ಹೃದಯ ನೀ?

ಮಹಿಳೆಯರಿಗೆ ಧೈರ್ಯ ತುಂಬಿ,
ನಾಯಕತ್ವದ ಪಥ ತೋರಿದೆಯೆ?
ಉತ್ತರ ಪ್ರದೇಶದ ರಾಜ್ಯಪಾಲಿಯಾಗಿ,
ಇತಿಹಾಸದ ಪುಟಗಳಲ್ಲಿ ಹೆಸರು ಬರೆದೆಯೆ?

ಓ ಭಾರತ ಕೋಗಿಲೆ!
ನಿನ್ನ ಗಾನ ಇನ್ನೂ ಕೇಳಿಸುತ್ತದೆ?


ಸ್ವಾತಂತ್ರ್ಯದ ಹಾದಿಯಲ್ಲಿ ನೀ ಬಿತ್ತಿದ ಬೀಜ,
ಇಂದಿಗೂ ನಮ್ಮ ಮನದಲ್ಲಿ ಅರಳುತ್ತದೆ? ??

**ಅಮರೇಶ್**

## ಲಾಲ್‌ಬಾಗ್‌ಗೆ ಮತ್ತೊಂದು ಎಂಟ್ರಿ ಗೇಟ್ ನಿರ್ಮಾಣಕ್ಕೆ ವಾಯುವಿಹಾರಿಗಳ ವಿರೋಧ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಸಿಲಿಕಾನ್ ಸಿಟಿಯ ಸಸ್ಯಕಾಶಿ ಎಂದೇ ಖ್ಯಾತಿ ಪಡೆದಿರುವ ಲಾಲ್‌ಬಾಗ್ ಮತ್ತೊಮೆ ಚರ್ಚೆಯ ಕೇಂದ್ರಬಿಂದುವಾಗಿದೆ. ಈಗಾಗಲೇ ನಾಲ್ಕು ಪ್ರವೇಶ ದ್ವಾರಗಳ ಮೂಲಕ ಸಾರ್ವಜನಿಕರಿಗೆ ಪ್ರವೇಶ ಕಲ್ಪಿಸಿರುವ ತೋಟಗಾರಿಕಾ ಇಲಾಖೆ, ಇದೀಗ ಕ್ಯಾಂಟೀನ್ ಸಮೀಪ ಮತ್ತೊಂದು ಹೊಸ ಗೇಟ್ ನಿರ್ಮಿಸುವ ಚಿಂತನೆ ನಡೆಸಿದೆ. ಈ ನಿರ್ಧಾರಕ್ಕೆ ವಾಯುವಿಹಾರಿಗಳು ಹಾಗೂ ಪರಿಸರ ಪ್ರೇಮಿಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ.**



ಲಾಲ್ ಬಾಗ್ ಪ್ರವೇಶಕ್ಕೆ ಈಗ ನಾಲ್ಕು ಪ್ರಮುಖ ಗೇಟ್‌ಗಳಿದ್ದು, ಬೆಳಿಗ್ಗೆ-ಸಂಜೆ ಸಾವಿರಾರು ಮಂದಿ ವಾಯುವಿಹಾರಿಗಳು, ಪ್ರವಾಸಿಗರು ಮತ್ತು ಪ್ರಕೃತಿ ಪ್ರಿಯರು ಇದೇ ದ್ವಾರಗಳ ಮೂಲಕ ಓಡಾಡುತ್ತಾರೆ. ಉದ್ಯಾನವನದ ಆವರಣದಲ್ಲಿ ತೋಟಗಾರಿಕಾ ಇಲಾಖೆಯ ಹಲವು ಕಚೇರಿಗಳೂ ಕಾರ್ಯ ನಿರ್ವಹಿಸುತ್ತಿವೆ. ಆಡಳಿತಾತಕ ದೃಷ್ಟಿಯಿಂದ ಅಧಿಕಾರಿಗಳು ಹಾಗೂ ಕಚೇರಿ ವ್ಯವಹಾರಗಳಿಗೆ ಅನುಕೂಲವಾಗುವಂತೆ ಹೊಸ ಗೇಟ್ ಅಗತ್ಯವಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ. ಕಚೇರಿಗಳಿಗೆ ನೇರ ಪ್ರವೇಶ, ವಾಹನಗಳ ಸುಗಮ ಸಂಚಾರ ಹಾಗೂ ಆಡಳಿತ ಕಾರ್ಯಗಳಿಗೆ ನೆರವಾಗಲಿದೆ. ಈ ಹಿನ್ನೆಲೆ ಹೊಸ ಗೇಟ್ ನಿರ್ಮಾಣಕ್ಕೆ ಸಿದ್ದತೆ ಎಂದು ಎಂಬುದು ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಆದರೆ ವಾಯುವಿಹಾರಿಗಳು ಹಾಗೂ ಪರಿಸರ ಪ್ರೇಮಿಗಳು, ಈಗಿರುವ ಗೇಟ್‌ಗಳೇ ಸಾಕು. ಹೊಸ ದ್ವಾರ ನಿರ್ಮಾಣದಿಂದ ಸಾರ್ವಜನಿಕರಲ್ಲಿ ಗೊಂದಲ ಉಂಟಾಗುವ ಸಾಧ್ಯತೆ ಇದೆ. ಉದ್ಯಾನವನದ ಪರಿಸರ ಸಮತೋಲನಕ್ಕೆ ಧಕ್ಕೆಯಾಗಬಹುದು ಎಂದು ಹೇಳುತ್ತಿದ್ದಾರೆ. ಲಾಲ್ ಬಾಗ್ ಕೇವಲ ಉದ್ಯಾನವಲ್ಲ, ನಗರದ ಉಸಿರುಗಾವಲು. ಹೀಗಾಗಿ ಯಾವುದೇ ಹೊಸ ನಿರ್ಮಾಣ ಪರಿಸರದ ಮೇಲೆ ಪರಿಣಾಮ ಬೀರುವ ಸಾಧ್ಯತೆಯನ್ನು ನಿರ್ಲಕ್ಷಿಸಬಾರದು ಎಂದು ಪರಿಸರ ಸಂಘಟನೆಗಳು ಎಚ್ಚರಿಕೆ ನೀಡಿವೆ.ಆದರೆ ತೋಟಗಾರಿಕಾ ಇಲಾಖೆ ಪರಿಸರ ಪ್ರೇಮಿಗಳು ಹಾಗೂ ವಾಯುವಿಹಾರಿಗಳ ಅಭಿಪ್ರಾಯವನ್ನು ಪರಿಗಣಿಸುತ್ತದೆಯೇ ಎಂಬುದನ್ನು ಕಾದುನೋಡಬೇಕಿದೆ.

# ಬಾಲ ಭಾರತಿ ವಿದ್ಯಾ ಮಂದಿರ: ರಾಷ್ಟ್ರೀಯ ವಿಜ್ಞಾನ ದಿನ ಆಚರಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದ ಬಾಲಭಾರತಿ ವಿದ್ಯಾಮಂದಿರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಾಗೂ ಪೋಷಕರ ಶಿಕ್ಷಕರ ಸಭೆ ಭಾನುವಾರ ಜರುಗಿತು. ಈ ಸಭೆಯ ಮುಖ್ಯ ಅತಿಥಿಗಳಾಗಿ ಕ್ಷೇತ್ರ ಸಮನ್ವಯಾಧಿಕಾರಿಗಳಾದ ಆರ್.ಬಿ.ದಮ್ಮೂರಮಠ ವಹಿಸಿಕೊಂಡು ವಿಜ್ಞಾನ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ,**

ಜ್ಯೋತಿ ಬೆಳಗಿಸಿ ಮಕ್ಕಳಿಗೆ ಪ್ರಸ್ತುತ ದಿನಮಾನಗಳಲ್ಲಿ ವಿಜ್ಞಾನದ ಕ್ಷೇತ್ರ ವ್ಯಾಪ್ತಿ ಎಲ್ಲ ಮಕ್ಕಳು ತಿಳಿದು ಜ್ಞಾನದ ಬೆಳಕನ್ನ ಮೂಡಿಸುವ ನಾಗರಿಕರಾಗಿ ಸಮಾಜದ ಬದಲಾದ ಪರಿಸ್ಥಿತಿಯಲ್ಲಿ ಸಂಸ್ಕಾರ, ಸಂಸ್ಕೃತಿಗಳ ವಿಚಾರಧಾರೆಗಳನ್ನು ತಿಳಿಸುವ ಏಕೈಕ ಪ್ರತಿಷ್ಠಿತ ಶಾಲೆ ಬಾಲಭಾರತಿ ವಿದ್ಯಾ ಮಂದಿರ ಆಗಿದೆ ಎಂದು ತಿಳಿಸಿದರು. ಇನ್ನೋರ್ವ ಮುಖ್ಯ ಅತಿಥಿ ರಾಜುಸಿಂಗ್



ವಿಜಾಪುರ ಸಮೂಹ ಸಂಪನ್ಮೂಲ ವ್ಯಕ್ತಿಗಳು ಅವರು ಶ್ರೀ ಸಿ.ವಿ.ರಾಮನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿ ತಮ್ಮ ಅನುಭವದ ನುಡಿಗಳನ್ನು ಇಂದಿನ ಆಧುನಿಕ ಭರಾಟೆಯಲ್ಲಿ ಸಂಸ್ಕಾರವನ್ನು ಮರೆತು ಬದುಕುವುದಕ್ಕಿಂತ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನ ನೀಡುವಲ್ಲಿ ಈ ವಿದ್ಯಾಸಂಸ್ಥೆ ಪ್ರಮುಖ ಪಾತ್ರ ವಹಿಸಿದೆ ಹಾಗೆ ಇಂದಿನ ದಿನಗಳಲ್ಲಿ ಮೊಬೈಲನ್ನು ಪಾಲಕರು ಮಕ್ಕಳಿಗೆ ಕೊಡದೆ ಪಠ್ಯಪುಸ್ತಕವನ್ನು ಓದುವುದರ ಜೊತೆಗೆ ಒಳ್ಳೆಯ ವಿಚಾರಗಳನ್ನು ತಿಳಿಸಿ ಮಕ್ಕಳಲ್ಲಿ ವಿಜ್ಞಾನದ ಪರಿಕಲ್ಪನೆ ಹೊಸ ಹೊಸ ಆವಿಷ್ಕಾರದ ಬಗ್ಗೆ ತಿಳಿಸಬೇಕೆಂದು ಸಲಹೆ ಸೂಚನೆಗಳನ್ನು ನೀಡಿದರು.

ಹಾಗೂ ಬಾಲಭಾರತಿ ವಿದ್ಯಾಮಂದಿರ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಮಹೇಶ ಓದಿ ಅವರು ಪ್ರಾಸ್ತಾವಿಕ ನುಡಿಗಳನ್ನು ಹೇಳಿ ಬದಲಾದ ಶಿಕ್ಷಣ ವ್ಯವಸ್ಥೆಯಲ್ಲಿ ಬಾಲಭಾರತಿ ವಿದ್ಯಾಮಂದಿರ ಸಂಸ್ಥೆಯು ಪಬ್ಲಿಕ್ ಮಾದರಿಯ ಶಿಕ್ಷಣವನ್ನು ಕೊಡುವಲ್ಲಿ ಮುಂಚೂಣಿಯಲ್ಲಿ ತನ್ನ ಕಾರ್ಯ ಮಾಡ್ತಾ ಸಾಗುತ್ತಿದೆ ಎಂದು ತಿಳಿಸಿದರು.

# ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿ ಆಚರಣೆ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ತಾಲೂಕ ಆಡಳಿತದ ವತಿಯಿಂದ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಪ್ರದೀಪ ದೇವಗಿರಿ ತಹಶೀಲ್ದಾರ್ ಗ್ರೇಡ್- 2 ಅವರು ಶ್ರೀ ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ ಎಲ್ಲರಿಗೂ ಜಯಂತಿಯ ಶುಭಾಶಯಗಳನ್ನು ತಿಳಿಸಿದರು.**

ಈ ಸಂದರ್ಭದಲ್ಲಿ ತಾಲೂಕ ಬೇಡ ಜಂಗಮ ಸಮಾಜದ ಗೌರವ ಅಧ್ಯಕ್ಷರಾದ ಪೂಜ್ಯ ರಾಮಲಿಂಗಯ್ಯ ಮಹಾಸ್ವಾಮಿಗಳು ಮಾತನಾಡಿ ಶ್ರೀ ರೇಣುಕಾಚಾರ್ಯರು ಇಡೀ ಮನುಕುಲದ ಏಳಿಗೆಯನ್ನು ಬಯಸಿದವರು ಅವರು ಧರ್ಮದಿಂದಲೇ ಜಗತ್ತಿಗೆ ಶಾಂತಿ ಲಭಿಸುತ್ತದೆ ಎಂಬ ಸಂದೇಶವನ್ನು ನೀಡಿದ್ದಾರೆ ಅವರ ಬದುಕಿನ ಆದರ್ಶಗಳ ಪ್ರಾಮಾಣಿಕ ಅನುಸರಣೆಯನ್ನು ನಾವೆಲ್ಲರೂ ಮಾಡಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಬೇಡ ಜಂಗಮ ಸಮಾಜದ ತಾಲೂಕ ಘಟಕದ ಅಧ್ಯಕ್ಷರಾದ ಶರಣಯ್ಯ ಹಿರೇಮಠ, ಶ್ರೀ ಗುರು ಹಿರೇಮಠ, ಶಿವಶಂಕರಯ್ಯ ಹಿರೇಮಠ, ಉಪಾಧ್ಯಕ್ಷ ಶಿವಲಿಂಗಯ್ಯ ಹಿರೇಮಠ, ಕಾರ್ಯದರ್ಶಿ ಈರಯ್ಯ ಹಿರೇಮಠ, ಸಂಘಟನಾ ಕಾರ್ಯದರ್ಶಿ ಗಜದಂಡಯ್ಯ ಹಿರೇಮಠ, ಸಮಾಜದ ಸದಸ್ಯರು ಗಣ್ಯರು ಹಿರಿಯರು ಹಾಗೂ ವಿವಿಧ ಇಲಾಖೆಗಳ ಮುಖ್ಯಸ್ಥರು ಮತ್ತು ಸಿಬ್ಬಂದಿಗಳು ಇದ್ದರು.

# ವಿದ್ಯಾವಂತರೇ ಇಂದು ಡಿಜಿಟಲ್ ಅಪರಾಧಕ್ಕೆ ಬಲಿಯಾಗುತ್ತಿರುವುದು ದುರಂತ :ಶರಣಬಸವ ಸಿಂಧನೂರು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ರಾಷ್ಟ್ರೀಯ ಸೇವಾ ಯೋಜನೆ ಘಟಕ ವಾರ್ಷಿಕ ವಿಶೇಷ ಶಿಬಿರದ ಮೂರನೇ ದಿನದ ಉಪನ್ಯಾಸದಲ್ಲಿ ಅವರ ಮಾತನಾಡಿ ಸಮಾಜದ ನಾಗರಿಕರು ಯುವಕರು ಮತ್ತು ಶಿಕ್ಷಣವಂತರು ಅರಿವಿಲ್ಲದೆ ಹಾಗೂ ಅದರ ವ್ಯಾಮೋಹಕ್ಕೆ ಒಳಗಾಗಿ ತಮ್ಮನ್ನು ಬಲಿಪಶುಗಳನ್ನಾಗಿ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಬೇಸರದ ಸಂಗತಿ ಎಂದು ತಿಳಿಸಿದರು.**

ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಪಂಚಾಕ್ಷರಯ್ಯ ಸ್ವಾಮಿ ಮಾತನಾಡಿ ಎಸ್ ಎಸ್ ವಿಧ್ಯಾರ್ಥಿಗಳ ಕಾರ್ಯ ವೈಖರಿ ಪ್ರಶಂಸಿದರು ಗ್ರಾಮದ ಹಿರಿಯ ಮುಖಂಡರಾದ ಹನುಮೇಶ ಸಾಲಗುಂದ ಇವರು ಮಾತನಾಡಿ ಸ್ವಯಂ ಸೇವಕರ ಎನ್ ಎಸ್ ಎಸ್ ಸೇವೆ ಕಾರ್ಯ




ತಮ್ಮನು ಭವಿಷ್ಯದಲ್ಲಿ ದೊಡ್ಡ ಹುದ್ದೆಗೆ ಕರೆದುಕೊಂಡು ಹೋಗುತ್ತದೆ ಹಾಗೂ ಉತ್ತಮ ಮೌಲ್ಯಗಳನ್ನು ಬೆಳೆಸಿಕೊಳ್ಳಿರಿ ಎಂದರು ಕುಮಾರಿ ಕಾವೇರಿ ಮೇಡಂ ತಮ್ಮ ಬಾಲ್ಯದ ಎನ್ ಎಸ್ ಎಸ್ ಚಟುವಟಿಕೆಗಳನ್ನು ಸ್ಮರಿಸಿ ಮಕ್ಕಳಿಗೆ ಶುಭ ಹಾರೈಸಿದರು ಪಂಪಾಪತಿ ರಾಜ್ಯಶಾಸ್ತ್ರ ಉಪನ್ಯಾಸಕರು ಈ ಸಂಧರ್ಭದಲ್ಲಿ ಮಾತನಾಡಿ ಡಿಜಿಟಲ್ ಅಪರಾಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ಮಕ್ಕಳಿಗೆ ತಿಳಿಸಿ ಅದರಿಂದ ದೂರವೀರಲೂ ಕಿವಿ ಹೇಳಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಚನ್ನಬಸಮ್ಮ ಮಲ್ಲಾಪುರ ವಹಿಸಿದ್ದರು, ಇವರು ಇಂದಿನ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ ಅವಶ್ಯಕ ಎಂದು ತಿಳಿ ಹೇಳಿದರು ಅತಿಥಿಗಳಾಗಿ ಹೊನ್ನಪ್ಪ ಬೆಳಗುರ್ಕಿ, ಯಂಕೋಬ್ ಬೂದಿವಾಳ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಭಾನು ಮುಸ್ತಾಕ ತಂಡದವರು ನಿರ್ವಹಿಸಿದರು. ನಂದಿನಿ ಬಿಕಾಂ ವಿದ್ಯಾರ್ಥಿನಿ ನಿರೂಪಿಸಿದರು, ಸ್ವಾತಿ ತಂಡ ಪ್ರಾರ್ಥಿಸಿತು , ನವೀನ್ ಸ್ವಾಗತಿಸಿದರು, ಆಯೇಷಾ ವಿಧ್ಯಾರ್ಥಿನಿ ವಂದಿಸಿದರು

# ಮಗುವಿನ ಗುರುತಿನಲ್ಲಿ ತಾಯಿಯೇ ಸರ್ವಸ್ವ : ಹೈಕೋರ್ಟ್ ಮಹತ್ವದ ತೀರ್ಪು

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮಗುವಿನ ಹಕ್ಕು ಮತ್ತು ತಾಯಿಯ ಘನತೆಯನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಕರ್ನಾಟಕ ಹೈಕೋರ್ಟ್ ತೀರ್ಪೊಂದನ್ನು ನೀಡಿದೆ. ಮಗುವಿನ ಜನನ ಪ್ರಮಾಣಪತ್ರದಲ್ಲಿ ಜೈವಿಕ ತಂದೆಯ ಹೆಸರನ್ನು ತೆಗೆದುಹಾಕಿ, ತಾಯಿಯ ಉಪನಾಮವನ್ನು ಸೇರಿಸಲು ನ್ಯಾಯಾಲಯವು ಅನುಮತಿ ನೀಡಿದೆ.**

ಬೆಂಗಳೂರಿನ ಮಹಿಳೆಯೊಬ್ಬರು ನೇಪಾಳ ಮೂಲದ ವ್ಯಕ್ತಿಯೊಂದಿಗೆ ಲಿವ್-ಇನ್ ನಂಟಿನಲ್ಲಿದ್ದರು. 2017ರಲ್ಲಿ ಅವರಿಗೆ ಹೆಣ್ಣು ಮಗು ಜನಿಸಿತ್ತು. ಆದರೆ ಮಗು ಜನಿಸಿದ ನಂತರ ತಂದೆಯು ತಾಯಿ-ಮಗುವನ್ನು ಬಿಟ್ಟು ದೂರವಾಗಿದ್ದನು. ಮಗುವಿನ ಪಾಲನೆಯಲ್ಲಿ ಆತನ ಯಾವುದೇ ಪಾತ್ರವಿರಲಿಲ್ಲ. ಈ ಹಿನ್ನೆಲೆಯಲ್ಲಿ, ಮಗುವಿನ ಜನನ ಪ್ರಮಾಣಪತ್ರದಲ್ಲಿ ತನ್ನನ್ನು ಬಿಟ್ಟು ಹೋದ ಸಂಗಾತಿಯ ಹೆಸರನ್ನು ತೆಗೆದು, ತನ್ನ ಕುಟುಂಬದ ಉಪನಾಮವನ್ನು ಸೇರಿಸಲು ತಾಯಿ ಮನವಿ ಮಾಡಿದ್ದರು.



ಇದನ್ನು ಅಧಿಕಾರಿಗಳು ತಿರಸ್ಕರಿಸಿದಾಗ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಪೀಠವು ಮಗುವಿನ ಸಂಪೂರ್ಣ ಜವಾಬ್ದಾರಿಯನ್ನು ತಾಯಿ ಹೊತ್ತಿರುವಾಗ, ಆಕೆಯೇ ಮಗುವಿನ ನೈಸರ್ಗಿಕ ಪೋಷಕಿಯಾಗಿರುತ್ತಾರೆ. ಮಗುವಿನ ನೈಜ ಕೌಟುಂಬಿಕ ಸಂಬಂಧವನ್ನು ಪ್ರತಿಫಲಿಸುವ ಗುರುತನ್ನು ಹೊಂದುವುದು ಮಗುವಿನ ಮೂಲಭೂತ ಹಕ್ಕು. ಇದು ಸಂವಿಧಾನದ 21ನೇ ವಿಧಿಯಡಿ ರಕ್ಷಿಸಲ್ಪಟ್ಟಿದೆ. ಮಗುವಿಗೆ ತಾಯಿಯ ಉಪನಾಮ ನೀಡುವುದರಿಂದ ತಂದೆಯ ಸ್ಥಾನಮಾನವೇನೂ ಕಡಿಮೆ ಆಗುವುದಿಲ್ಲ. ಇದು ಸಮಾಜದಲ್ಲಿ ಲಿಂಗ ಸಮಾನತೆಯ ಪ್ರತಿಬಿಂಬವಾಗಿದೆ. ಮಗುವಿನ ಹೆಸರಿನಿಂದ ತಂದೆಯ ಹೆಸರು ಅಳಿಸಿದ ಮಾತ್ರಕ್ಕೆ, ಜೈವಿಕ ತಂದೆಯಿಂದ ಮಗುವಿಗೆ ಸಿಗಬೇಕಾದ ಆಸ್ತಿ ಹಕ್ಕು, ಉತ್ತರಾಧಿಕಾರದ ಕಾನೂನುಬದ್ಧ ಹಕ್ಕುಗಳು ಕಸಿದುಕೊಳ್ಳಲ್ಪಡುವುದಿಲ್ಲ. ಹೆಸರಿನ ಬದಲಾವಣೆಯು ಮಗುವಿನ ಮಾನಸಿಕ ನೆಮ್ಮದಿ, ಘನತೆ ಮತ್ತು ಪ್ರಾಯೋಗಿಕ ಅನುಕೂಲತೆಗಾಗಿ ಪೂರಕವಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಈ ತೀರ್ಪು ಒಂಟಿ ಪೋಷಕರಿಗೆ, ಅದರಲ್ಲೂ ವಿಶೇಷವಾಗಿ ಲಿವ್-ಇನ್, ಸಂಕಷ್ಟದ ಸಂಬಂಧಗಳಿಂದ ಹೊರಬಂದ ಮಹಿಳೆಯರಿಗೆ ದೊಡ್ಡ ಆಸರೆಯಾಗಿದೆ. ಮಗುವಿನ ಮೇಲೆ ತಾಯಿಗೂ ಸಮಾನ ಹಕ್ಕಿದೆ ಮತ್ತು ಆಕೆಯ ಗುರುತಿನ ಮೂಲಕವೇ ಮಗು ಸಮಾಜದಲ್ಲಿ ಗುರುತಿಸಿಕೊಳ್ಳಬಹುದು ಎಂಬುದನ್ನು ಈ ಆದೇಶ ಸಾಬೀತುಪಡಿಸಿದೆ. ಬೆಂಗಳೂರಿನ ಜನನ ಮತ್ತು ಮರಣಗಳ ಮುಖ್ಯ ನೋಂದಣಾಧಿಕಾರಿಗೆ ಈ ಬದಲಾವಣೆಗಳನ್ನು ಜಾರಿಗೆ ತರುವಂತೆ ಹೈಕೋರ್ಟ್ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

# ಸಮಾನತೆಯುಳ್ಳ ಸಮಾಜ ನಿರ್ಮಾಣ ಸಂವಿಧಾನದ ಆಶಯ : ಎ.ಬಿ.ರಾಮಚಂದ್ರಪ್ಪ

ನೈಜ್ಯ ದೆಸೆ ನ್ಯೂಸ್

**ಜಾತಿಲಿಂಗ ಮತ್ತು ಶೋಷಣೆ ಸಹಿತ ಸಮಾನತೆಯುಳ್ಳ ಸಮಾಜ ನಿರ್ಮಾಣ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವುದು,ವೈಚಾರಿಕತೆಯನ್ನು ಬೆಳೆಸಿ ಮೂಢನಂಬಿಕೆಗಳನ್ನು ತೊಡೆದು ಹಾಕುವುದು ಮಾನವ ಬಂಧುತ್ವದ ಮೂಲ ಉದ್ದೇಶವಾಗಿದೆ ಎಂದು ರಾಜ್ಯ ಸಂಚಾಲಕ ಎ.ಬಿ.ರಾಮಚಂದ್ರಪ್ಪ ಹೇಳಿದರು.**

ಪಟ್ಟಣದ ಪ್ರೇರಣಾ ಸಮಾಜ ಸೇವಾ ಟ್ರಸ್ಟ್ (ಚರ್ಚ್) ಆವರಣದಲ್ಲಿ ಭಾನುವಾರ ಮಾನವ ಬಂಧುತ್ವ ವೇದಿಕೆಯಿಂದ ನಡೆದ ಸಂಚಲನ ಸಮಿತಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ನಾವುಗಳು ಸಂವಿಧಾನ ವಿರೋಧಿ ನಡೆಯನ್ನು ಪ್ರಶ್ನೆ ಮಾಡುವ ಕೆಲಸ ಆಗಬೇಕಾಗಿದೆ




ಆಗಾದರೆ ಮಾತ್ರ ನಾವು ಪ್ರಜಾಪ್ರಭುತ್ವಕ್ಕೆ ಮೌಲ್ಯ ನೀಡಿದಂತಾಗುತ್ತದೆ. ಪ್ರಶ್ನಿಸದೆ ಹೋದರೆ ಮನುವಾದಿ ಗಳು ಸಂವಿಧಾನವನ್ನು ಮತ್ತಷ್ಟು ಮೊಗದಷ್ಟು ಅಪಾಯದ ಅಂಚಿಗೆ ತಳ್ಳುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು. ನಾವು ಯಾವುದೇ ಜಾತಿಯನ್ನಾಗಲಿ ಅಥ-'ವಾ ಧರ್ಮವನ್ನಾಗಲಿ ವಿರೋಧ ಮಾಡುತ್ತಿಲ್ಲ ಆದರೆ ಅವರು ಆಚರಿಸುತ್ತಿರುವ ಮೌಢ್ಯವನ್ನು ಮಾತ್ರ ವಿರೋಧೀಸುತ್ತೇವೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಪಾಲು ಸಮಬಾಳು ಎಂಬ ಉದ್ದೇಶವನ್ನು ಇಟ್ಟುಕೊಂಡು ಸತೀಶ್ ಜಾರಕಿಹೊಳಿ ಅವರು ಸ್ವಂತ ಹಣದಿಂದ ಸಂಘಟನೆ ಮಾಡುತ್ತಿದ್ದಾರೆ. ಅಲ್ಲದೆ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಸ್ವಾವಲಂಬಿ ಬದುಕಿಗೆ ಗುಡಿ ಕೈಗಾರಿಕೆಗಳ ತಯಾರಿಕೆಗೆ ತರಬೇತಿಗಳನ್ನು ನೀಡುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಧ್ಯೇಯ ಉದ್ದೇಶ ಅವರದಾಗಿದೆ. ತರಬೇತಿಗೆ ಪಾಲ್ಗೊಳ್ಳುವ ಪ್ರತಿಯೊಬ್ಬರಿಗೂ ಊಟ, ವಸತಿ ಸೌಲಭ್ಯ ಒದಗಿಸಲಾಗುವುದು. ರಾಜ್ಯದಲ್ಲಿ 5 ಕಡೆ ತರಬೇತಿ ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದರು.

ರಾಜ್ಯದಲ್ಲಿ ಪ್ರಸ್ತುತ 60 ತಾಲೂಕುಗಳನ್ನು ಆಯ್ಕೆ ಮಾಡ ಲಾಗಿದ್ದು ಹಂತ-ಹಂತವಾಗಿ ಎಲ್ಲಾ ಕಡೆಯೂ ಕಾರ್ಯಗಾರ, ಸಂವಿಧಾನದ ಜಾಗೃತಿ, ಗ್ರಾಮ ಮತ್ತು ತಾಲೂಕು ಘಟಕಗಳನ್ನು ತೆರೆಯಲು ಮಾನವ ಬಂಧುತ್ವ ವೇದಿಕೆ ಮುಂದಾಗಿದೆ ಎಂದರು.

ಮಾನವ ಬಂಧುತ್ವ ವೇದಿಕೆ ರಾಜ್ಯ ಮುಖಂಡ ಕೆ.ಪಿ.ಪಾಲಯ್ಯ ಮಾತನಾಡಿ, ಸಂವಿಧಾನದ ಮೂಲ ಆಶಯಗಳಾದ ಬಂಧುತ್ವ ಸಮಾನತೆಯನ್ನು ಸಾಮಾಜಿಕ ನ್ಯಾಯ ಪರಿಕಲ್ಪನೆಗೆ ರಾಜಕೀಯ ಶಕ್ತಿಯನ್ನು ತುಂಬಬೇಕಾದ ಸನ್ನಿವೇಶಕ್ಕೆ ಜನರನ್ನು ಸನ್ನದ್ಧಗೊಳಿ ಸುವುದು ಇದರ ಗುರಿ.

## ನೇಮಕಾತಿ ಪ್ರಕಟಣೆ

RRB ನೇಮಕಾತಿ 2026–21997 ಸಹಾಯಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ RRB ನೇಮಕಾತಿ 2026: 21997 ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರೈಲ್ವೆ ನೇಮಕಾತಿ ಮಂಡಳಿಯು ಜನವರಿ 2026 ರ ಖಃಖಃ ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 02–03–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು (ಕೊನೆಯ ದಿನಾಂಕವನ್ನು 09–03–2026 ರವರೆಗೆ ವಿಸ್ತರಿಸಲಾಗಿದೆ) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 31–01–2026 ಅರ್ಹ ಬರಹಗಾರ ಅಭ್ಯರ್ಥಿಗಳು ತಮ್ಮ ಬರಹಗಾರರ ವಿವರಗಳನ್ನು ಅರ್ಜಿ ಪೋರ್ಟಲ್‌ನಲ್ಲಿ ಒದಗಿಸಬೇಕಾದ ದಿನಾಂಕಗಳು: 15 ರಿಂದ 19 ಮಾರ್ಚ್ 2026 (ಕೊನೆಯ ದಿನಾಂಕವನ್ನು 22–03–2026 ರಿಂದ 26–03–2026 ರವರೆಗೆ ವಿಸ್ತರಿಸಲಾಗಿದೆ) ಅಧಿಕೃತ ವೆಬ್‌ಸೈಟ್: indianrailways.gov.in

## ಇರಾನ್–ಇಸ್ರೇಲ್ ಯುದ್ಧ :ಗಲ್ಫ್ ರಾಷ್ಟ್ರಗಳಲ್ಲಿ ಸಿಲುಕಿಕೊಂಡ ಕನ್ನಡಿಗರು

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಇರಾನ್–ಇಸ್ರೇಲ್ ಯುದ್ಧದ ಹಿನ್ನೆಲೆ ಇರಾನ್ ವಾಯುಪ್ರದೇಶ ತಾತ್ಕಾಲಿಕವಾಗಿ ಮುಚ್ಚಿರುವುದರಿಂದ ಗಲ್ಫ್ ರಾಷ್ಟ್ರಗಳಲ್ಲಿ ಅನೇಕರ ಕನ್ನಡಿಗರು ಸಿಲುಕಿಕೊಂಡಿದ್ದಾರೆ. ಪ್ರವಾಸಕ್ಕೆಂದು ತೆರಳಿದ್ದ ಬಳ್ಳಾರಿ ಮೂಲದ 35 ಪ್ರವಾಸಿಗರು, ಜೊತೆಗೆ ಬಿಗ್ ಬಾಸ್ ಮಾಜಿ ಸ್ಪರ್ಧಿ ಡ್ರೋನ್ ಪ್ರತಾಪ್ , ವಿಧಾನ ಪರಿಷತ್ ಸದಸ್ಯ ಭೋಜೇಗೌಡ, ಬಳ್ಳಾರಿ ಭರತ್ ರೆಡ್ಡಿ ಸೇ–ರಿದಂತೆ 150ಕ್ಕೂ ಹೆಚ್ಚು ಕನ್ನಡಿಗರು ದುಬೈನಲ್ಲಿ ಸಿಲುಕಿಕೊಂಡಿದ್ದಾರೆ. ಕುಟುಂಬ ಸಮೇತರಾಗಿ ಭೋಜೇಗೌಡ ದುಬೈ ತೆರಳಿದ್ದರು.**




ದುಬೈನಲ್ಲಿ ಸಿಲುಕಿರುವ ಬಗ್ಗೆ ಭೋಜೇಗೌಡ ಮಾಹಿತಿ ಹಂಚಿಕೊಂಡಿದ್ದಾರೆ.ದುಬೈಗೆ ತೆರಳುವ ವಿಮಾನಗಳ ಹಾರಾಟವನ್ನ ರದ್ದುಗೊಳಿಸಲಾಗಿದೆ. ಲಕ್ಷಾಂತರ ಪ್ರಯಾಣಿಕರು ದುಬೈನಲ್ಲಿ ಸಿಲುಕಿಕೊಂಡಿದ್ದಾರೆ. ಅದರಲ್ಲಿ ಕರ್ನಾಟಕ 150 ಮಂದಿ ಕೂಡ ದುಬೈನಲ್ಲೇ ಸಿಲುಕಿದ್ದಾರೆ. ಇನ್ನು ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಮಾತನಾಡಿ ಬಳ್ಳಾರಿ ಕ್ಷೇತ್ರದ ಜನರ ಬಗ್ಗೆ ಶಾಸಕ ಬಿ.ನಾಗೇಂದ್ರ ಮಾಹಿತಿ ನೀಡಿದ್ದಾರೆ. ನಾಗೇಂದ್ರ ಜೊತೆ ಮಾತನಾಡಿ ಘಟನೆಯ ವಿವರ ಪಡೆದುಕೊಂಡಿರುವ ಸಿಎಂ ಸಿದ್ದರಾಮಯ್ಯ, ಮುಖ್ಯ ಕಾರ್ಯದರ್ಶಿ ಜೊತೆ ಮಾತನಾಡುವುದಾಗಿ ಭರವಸೆ ನೀಡಿದ್ದಾರೆ. ದುಬೈನಲ್ಲಿ ವಿದ್ಯಾರ್ಥಿಗಳು ಸೇರಿ 150 ಹೆಚ್ಚು ಕನ್ನಡಿಗರು ಸಿಲುಕಿದ್ದಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿಕೆ ನೀಡಿದ್ದಾರೆ. ಅವರೆಲ್ಲಾ ಸಂಪರ್ಕಿಸಿ ಸುರಕ್ಷಿತವಾಗಿ ಕರೆತರುವ ಪ್ರಯತ್ನ ಮುಂದುವರೆದಿದೆ. ಫೆ.23ರಂದು ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕು ತೋರಣಘಟ್ಟ ಗ್ರಾಮದ 15 ಮಂದಿ ಮತ್ತು ಬಳ್ಳಾರಿ ಸುತ್ತಮುತ್ತಲಿನ 35 ಮಂದಿ ಸೇರಿ ಒಟ್ಟು 50ಕ್ಕೂ ಹೆಚ್ಚು ಕನ್ನಡಿಗರು ಪ್ರವಾಸಕ್ಕೆ ತೆರಳಿದ್ದರು. ವಾಪಸ್ಸು ಟಿಕೆಟ್ ಬುಕ್ ಮಾಡಿದ್ದರೂ ಶಾರ್ಜಾ, ಅಬುಧಾಬಿ ಮತ್ತು ದುಬೈ ವಿಮಾನ ನಿಲ್ದಾಣಗಳಲ್ಲಿ ಸಂಚಾರ ಸ್ಥಗಿತಗೊಂಡಿರುವುದರಿಂದ ಹೋಟೆಲ್‌ಗಳಲ್ಲಿ ತಂಗಬೇಕಾಗಿದೆ. ಪ್ರವಾಸದಲ್ಲಿ ಹಣ ಖರ್ಚಾಗಿ ಇದೀಗ ತಂಗುವ ವ್ಯವಸ್ಥೆಗೂ ಹಣದ ಕೊರತೆ ಎದುರಾಗಿದೆ. ಒಂದೇ ಕೊಠಡಿಯಲ್ಲಿ ಮೂವರು ತಂಗಿದ್ದು ದಿನಕ್ಕೆ ಸುಮಾರು 10,000 ರೂಪಾಯಿ ವೆಚ್ಚವಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ಪ್ರವಾಸಿಗರು ವಿದೇಶಾಂಗ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರದಿಂದ ತುರ್ತು ನೆರವು ಮತ್ತು ಶೀಘ್ರ ಸ್ವದೇಶಕ್ಕೆ ಮರಳುವ ವ್ಯವಸ್ಥೆಗಾಗಿ ಮನವಿ ಮಾಡಿದ್ದಾರೆ. ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನ್ನಡಿಗರಿಗಾಗಿ ಸಹಾಯವಾಣಿ ಆರಂಭಿಸುವುದಾಗಿ ಘೋಷಿಸಿದ್ದಾರೆ. ಬಳ್ಳಾರಿಯ ಪಂಪನಗೌಡ ಕುಟುಂಬಸ್ಥರು ಕುಟುಂಬ ಸಮೇತರಾಗಿ ದುಬೈ ಪ್ರವಾಸಕ್ಕೆ ತೆರಳಿದ್ದರು. ಯಾಳ್ಪಿ ಪಂಪನಗೌಡ ಕುಟುಂಬದ 15 ಜನ ಸೇರಿ ಬಳ್ಳಾರಿಯಿಂದ 35 ಜನ ದುಬೈ ಪ್ರವಾಸಕ್ಕೆ ತೆರಳಿದ್ದರು. ದುಬೈನಲ್ಲಿ ಸಿಲುಕಿರುವ ಪ್ರವಾಸಿಗರು ಕುಟುಂಬದ ಜೊತೆ ನಿರಂತರ ಸಂಪರ್ಕದಲ್ಲಿದ್ದಾರೆ. ಯಾವುದೇ ಆತಂಕ ಇಲ್ಲ, ನಾವು ಸುರಕ್ಷಿತವಾಗಿದ್ದೇವೆ ಎಂದು ಕುಟುಂಬಸ್ಥರ ಜೊತೆ ಪ್ರವಾಸಿಗರು ಹೇಳಿದ್ದಾರೆ. ಈಗಾಗಲೇ ಬಳ್ಳಾರಿ ಗ್ರಾಮೀಣ ಶಾಸಕ ಬಿ ನಾಗೇಂದ್ರ ಕೂಡಾ ಸಂಪರ್ಕ ಮಾಡಿದ್ದಾರೆ.

# ಮೌಲಾನ ಆಜಾದ್ ಮಾದರಿ (ಆಂಗ್ಲ ಭಾಷೆ) ಶಾಲೆಯ ಕಟ್ಟಡದ ಭೂಮಿ ಪೂಜೆ ನೆರವೇರಿಸಿದ ಸಚಿವ:ಎನ್ ಎಸ್ ಬೋಸರಾಜು

ನೈಜ್ಯ ದೆಸೆ ನ್ಯೂಸ್

**ಮಾನವಿ: ಕರ್ನಾಟಕ ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಪಂಚಾಯತ್ ರಾಯಚೂರ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ಮಾನ್ವಿ ನಗರದ ಬಹುದಿನಗಳ ಬೇಡಿಕೆಯಾದ ಜಿಲ್ಲಾ ಮಟ್ಟದ ಮೌಲಾನ ಆಜಾದ್ ಮಾದರಿ.**

(ಆಂಗ್ಲ ಭಾಷೆ ) ಶಾಲೆಯ / ಕಾಲೇಜು ಕಟ್ಟಡ ನಿರ್ಮಾಣದ ಅಂದಾಜು ಮೊತ್ತ 5 ಕೋಟಿ 27 ಲಕ್ಷ ರೂಪಾಯಿಗಳ ಕಟ್ಟಡ ಕಾಮಗಾರಿಯನ್ನು ಭೂಮಿ ಪೂಜ ಕಾರ್ಯಕ್ರಮವನ್ನು ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಪರಿಷತ್ತಿನ ಸಭಾ ನಾಯಕ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್ ಎಸ್ ಬೋಸರಾಜ್ ಜೀ ಅವರು ಮತ್ತು ಶಾಸಕರ ಜಿ ಹಂಪಯ್ಯ ನಾಯಕ್ ಸಾಹುಕಾರ್ ಇವರ ಸಮ್ಮುಖದಲ್ಲಿ ಪೂಜಾ



ಕಾರ್ಯಕ್ರಮವನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಹಾಗೂ ಗುತ್ತೇದಾರ–ರಿಗೆ ಮಾನ್ಯ ಸಚಿವರು ಮತ್ತು ಶಾಸಕರು ನಿಗದಿತ ಸಮಯದಲ್ಲಿ ಕಟ್ಟಡದ ಕಾಮಗಾ–ರಿಯನ್ನು ಪೂರ್ಣಗೊಳಿಸಿ ಹಾಗೂ ಕಾಮಗಾ–ರಿಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಿ ಎಂದು ಅಧಿಕಾರಿಗಳಿಗೆ ಮತ್ತು ಗುತ್ತೇದಾರರಿಗೆ ಸೂಚನೆಯನ್ನು ನೀಡಿದರು.ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ಲ ಗಪೂರ್ ಸಾಬ್, ಪಂಚ ಗ್ಯಾರಂಟಿಗಳ ಅಧ್ಯಕ್ಷರಾದ ಬಿಕೆ ಅಂಬರೇಶಪ್ಪ ವಕೀಲರು, ಕೆ ಶಾಂತಪ್ಪ, ರುದ್ರಪ್ಪ ಅಂಗಡಿ, ರೌಡ್ರು ಮಹಾಂತೇಶ ಸ್ವಾಮಿ, ಹುಸೇನ್ ಬೈಗ್, ಶೇಕ್ ಜಮೀಲ ಅಹಮದ್, ಸಾಬಿರ ಪಾಷಾ, ಎಂಡಿ ಇಸ್ಮಾಯಿಲ್ ಸಾಬ್, ಸೈಯದ್ ನಜರುದ್ದೀನ್ ಖಾದ್ರಿ ಕುರುಡಿ ಚಂದ್ರಶೇಖರ್, ಬಾಗಲವಾಡ ತಿಪ್ಪಣ್ಣ ವಕೀಲರು, Cಗುರುನಾಥ್ ನಾಯಕ್, ಗುತ್ತೇದರಾದ ಸೈಯದ್ ಅಕ್ಬರ್ ಪಾಷಾ



ಹುಸೇನಿ,ಮುಸ್ತಾಕ್ ಸಾಬ್ ಮೆಕಾನಿಕ್, ಎಂಡಿ ಶಫಿ, ಗುಡಿದಿನ್ನಿ ಶರಣಯ್ಯ ನಾಯಕ್, ದೇವೇಂದ್ರಪ್ಪ ಬೊಮ್ಮನಾಳ, ಆರಿಫ್ ಮಿಯಾ ಚಾಗ್ಭಾವಿ, ಸತ್ತರ್ ಬಂಗ್ಲೆವಲೇ,ನೂರುಸಾಬ್ ಜಾಗಿರ್ ಪನ್ನೋರ್, ಅನ್ವರ ಸಾಬ್,ಸೂರ್ಯನಾರಾಯಣ ಯಾದವ್, ಕಾಮೇಶ್ ಹಂಪಯ್ಯ ನಾಯಕ್ ಬೆಳಗನಪೇಟೆ, ಹಸನ್ ಸಾಬ್, ಚುಮ್ಲಾಪುರ್, ತಾಲೂಕ ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ಅಧಿಕಾರಿಗಳಾದ ಭಾಗಯ್ಯ ನಾಯಕ್, ಮೌಲಾನ ಅಬ್ದುಲ್ ಕಲಾಂ ಆಜಾದ್ ಶಾಲೆಯ ಮುಖ್ಯಪಾದ್ಯಾಯಣಿ ರೇಣುಕಾ, ಶಾಲೆಯ ಸಿಬ್ಬಂದಿ ವರ್ಗ ಸಾರ್ವಜನಿಕರು ಉಪಸ್ಥಿತರಿದ್ದರು.

# ರೇಣುಕಾಚಾರ್ಯರ ಮೂರ್ತಿಯ ಭವ್ಯ ಮೆರವಣಿಗೆ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಶ್ರೀ ರೇಣುಕಾಚಾರ್ಯರ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಜಂಗಮ ಸಮಾಜದ ತಾಲೂಕ ಘಟಕದ ಗೌರವಾಧ್ಯಕ್ಷರಾದ ಪರಮ ಪೂಜ್ಯ ರಾಮಲಿಂಗಯ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಶ್ರೀ ರೇಣುಕಾಚಾರ್ಯರ ಮೂರ್ತಿಯ ಭವ್ಯ ಮೆರವಣಿಗೆ ಭಾನುವಾರ ಜರುಗಿತು.**

ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ರಾಮಲಿಂಗಯ್ಯ ಮಹಾಸ್ವಾಮಿಗಳು ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿಯನ್ನು ಪಟ್ಟಣದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಜಂಗಮ ಸಮಾಜದ ಜೊತೆಗೆ ಪಟ್ಟಣದ ಸರ್ವ ಸಮಾಜದ ಬಾಂಧವರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದರು. ಸಾಸನೂರ–ತುಂಬಗಿ ಹಿರೇಮಠದ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಮೆರವಣಿಗೆಯಲ್ಲಿ ತಾಲೂಕ ಜಂಗಮ ಸಮಾಜದ ಅಧ್ಯಕ್ಷ ಶರಣಯ್ಯ ಹಿರೇಮಠ, ಶ್ರೀ ಗುರು ಹಿರೇಮಠ, ಶಿವಶಂಕರ ಹಿರೇಮಠ, ಉಪಾಧ್ಯಕ್ಷ ಶಿವಲಿಂಗಯ್ಯ ಹಿರೇಮಠ ಕಾರ್ಯದರ್ಶಿ ಈರಯ್ಯ ಹಿರೇಮಠ, ಸಂಘಟನಾ ಕಾರ್ಯದರ್ಶಿ ಗಜದಂಡಯ್ಯ ಹಿರೇಮಠ, ಶಿವಶಂಕರ ಹಿರೇಮಠ, ಓಂ ಪ್ರಕಾಶ ಡೋಣೂರಮಠ, ಶಾಂತಯ್ಯ ಹಿರೇಮಠ, ಸಿದ್ದರಾಮಯ್ಯ ಹಿರೇಮಠ, ಸುಜಾತಾ ರಾಮಗಿರಿಮಠ, ಬಸ್ಸಯ್ಯ ಹಿರೇಮಠ, ಶಾಂತಯ್ಯ ಹಿರೇಮಠ, ಗುರುಪಾದಯ್ಯ ಹಿರೇಮಠ, ಶಂಕ್ರಯ್ಯ ಹಿರೇಮಠ, ಚಂದ್ರಶೇಖರಯ್ಯ ಹಿರೇಮಠ, ತಾಲೂಕ ಬೇಡ ಜಂಗಮ ಸಮಾಜದ ಗಣ್ಯರು,

# ಬಳಗಾನೂರಿನಲ್ಲಿ ರೇಣುಕಾಚಾರ್ಯರ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಬಳಗಾನೂರು ಪಟ್ಟಣದಲ್ಲಿ ಅತ್ಯಂತ ಭಕ್ತಿ ಭಾವದಿಂದ ಮತ್ತು ವೈಭವದಿಂದ ಆಚರಿಸಲಾಯಿತು. ಈ ಪುಣ್ಯ ದಿನದ ಅಂಗವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯ ಮೂರ್ತಿ ಗೆ ವಿಶೇಷ ಪೂಜೆಗಳು, ವಚನ ಪಠಣ ಹಾಗೂ ಮಹಾಮಂಗಳಾರತಿ ನೆರವೇರಿಸಲಾಯಿತು.**

ಪ್ರಮುಖ ಕಾರ್ಯಕ್ರಮವಾಗಿ ಭಕ್ತರ ಸಮೂಹದ ಸಮ್ಮುಖದಲ್ಲಿ ರುದ್ರಾಭಿಷೇಕವನ್ನು ಶ್ರದ್ಧಾ–ಭಕ್ತಿಯಿಂದ ನಡೆಸಲಾಯಿತು. ವೇದ ಮಂತ್ರಗಳ ಘೋಷ ಹಾಗೂ ಭಜನೆಗಳ ನಡುವೆ ನಡೆದ ಈ ಪವಿತ್ರ ವಿಧಿ, ಭಕ್ತರಲ್ಲಿ ಆಧ್ಯಾತ್ಮಿಕ ಚೈತನ್ಯವನ್ನು ಮೂಡಿಸಿತು. ಈ ಸಂದರ್ಭದಲ್ಲಿ ಬಳಗಾನೂರು ಪಟ್ಟಣದ ಎಲ್ಲಾ ಜಂಗಮ ಬಂಧುಗಳು, ಗುರುಭಕ್ತರು ಹಾಗೂ ಊರಿನ ಗಣ್ಯರು ಭಕ್ತಿಭಾವದಿಂದ ಭಾಗವಹಿಸಿದರು. ಪಟ್ಟಣ ಪಂಚಾಯತಿ ಉಪಾಧ್ಯಕ್ಷರು , ಸರ್ವ ಸದಸ್ಯರು ಹಾಗೂ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಉಪಸ್ಥಿತ–ರಿದ್ದು, ಕಾರ್ಯಕ್ರಮಕ್ಕೆ ಗೌರವ ಹೆಚ್ಚಿಸಿದರು.

ಭಕ್ತರಿಗೆ ತೀರ್ಥ–ಪ್ರಸಾದ ವಿತರಣೆ ಮಾಡಲಾಗಿದ್ದು,ಅನ್ನಸಂತರ್ಪಣೆ ವ್ಯವಸ್ಥೆಯನ್ನೂ ಭಕ್ತರಿಗಾಗಿ ಸಮರ್ಪಕವಾಗಿ ಮಾಡಲಾಗಿತ್ತು. ಕಾರ್ಯಕ್ರಮದ ಅಂಗವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಉಪದೇಶಗಳು, ಧರ್ಮಸಂರಕ್ಷಣೆ, ಸಮಾಜಸೇವೆಯ ಮಹತ್ವ




ಮತ್ತು ಮೌಲ್ಯಗಳ ಕುರಿತು ಮಾತನಾಡಿ, ಅವರ ಜೀವನ ಸಂದೇಶಗಳನ್ನು ಎಲ್ಲರೂ ಅನುಸ–ರಿಸಬೇಕೆಂದು ವಕ್ತಾರರು ಕರೆ ನೀಡಿದರು. ಈ ಜಯಂತಿ ಆಚರಣೆ, ಗ್ರಾಮದಲ್ಲಿ ಏಕತೆ, ಭಕ್ತಿ ಹಾಗೂ ಸಂಸ್ಕೃತಿಯ ಪ್ರತೀಕವಾಗಿ ಮೂಡಿ ಬಂದಿದ್ದು, ಭಾಗವಹಿಸಿದ ಎಲ್ಲರ ಮನಸ್ಸಿನಲ್ಲಿ ಆಧ್ಯಾತ್ಮಿಕ ಸಂತೋಷವನ್ನು ಮೂಡಿಸಿತು. ಒಟ್ಟಾರೆಯಾಗಿ, ಬಳಗಾನೂರು ಪಟ್ಟಣದಲ್ಲಿ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮವು ಭಕ್ತಿ, ಶ್ರದ್ಧೆ ಮತ್ತು ಸಮೂಹ ಸಹಕಾರದ ಸೊಗಸಾದ ಉದಾಹರಣೆಯಾಗಿ ಯಶಸ್ವಿಯಾಗಿ ನೆರವೇರಿತು.

# ರಕ್ಷಣೆಗೆ ಕ್ರಮ : ಖರ್ಚು ವೆಚ್ಚ ಭರಿಸಲು ನಿರ್ಧಾರ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರ: ಇರಾನ್– ಇಸ್ರೇಲ್ ಯುದ್ಧದಿಂದಾಗಿ ಮಧ್ಯ ಪ್ರಾಚ್ಯದಲ್ಲಿ ಸಿಲುಕಿರುವ ಕರ್ನಾಟಕದವರ ರಕ್ಷಣೆಗೆ ರಾಜ್ಯ ಸರ್ಕಾರ ಕ್ರಮವಹಿಸಿದೆ ಜೊತೆಗೆ ಅವರು ವಾಪಸ್ ಬರುವವರೆಗೂ ಖರ್ಚು ವೆಚ್ಚಗಳನ್ನು ಸರ್ಕಾರ ಭರಿಸಲಿದೆ ಎಂದು ಕಂದಾಯ ಹಾಗೂ ವಿಪತ್ತು ನಿರ್ವಹಣಾ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.**

ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಯಾರು ಆತಂಕವಾಗೋದು ಬೇಡ. ರಾಜ್ಯ ಸರ್ಕಾರ ಕೇಂದ್ರ ವಿದೇಶಾಂಗ ಇಲಾಖೆ ಜೊತೆ ಸಂಪರ್ಕದಲ್ಲಿದೆ. ಎಲ್ಲರ ರಕ್ಷಣೆಗೂ ಕ್ರಮ ತೆಗೆದುಕೊಳ್ಳಲಿದೆ ಎಂದರು. ಏರ್ ಪೋರ್ಟ್ ನಲ್ಲಿ ಸಿಲುಕಿರೋರು ವೀಸಾ ಸಮಸ್ಯೆ ಇದ್ದರೆ ಸ್ಥಳೀಯ ರಾಯಭಾರಿ ಕಚೇ–ರಿಗೆ ಅಥವಾ ನಮಗೆ ಕರೆ ಮಾಡಿದ್ರೆ ವೀಸಾ ವ್ಯವಸ್ಥೆ ಮಾಡಲಾಗುತ್ತದೆ ಅಂತ ತಿಳಿಸಿದರು. ರಾಜ್ಯದವರು ವಾಪಸ್ ಬರೋವರೆಗೂ ಅಲ್ಲಿ ಆಗೋ ಖರ್ಚು ವೆಚ್ಚಗಳನ್ನ ರಾಜ್ಯ ಸರ್ಕಾರವೇ ಭರಿಸಲಿದೆ. ಇದನ್ನ ನಾವು ಕೇಂದ್ರ





ಸರ್ಕಾರದ ಮೂಲಕ ಮಾಡಬೇಕು. ಕೇಂದ್ರ ಸರ್ಕಾರ ಹಣವನ್ನ ಭರಿಸಿ ನಮಗೆ ಮಾಹಿತಿ ಕೊಟ್ಟರೆ ರಾಜ್ಯ ಸರ್ಕಾರ ಸಂಪೂರ್ಣವಾಗಿ ಹಣವನ್ನ ಭರಿಸಲಿದೆ ಎಂದು ಸ್ಪಷ್ಟಪಡಿಸಿದರು.

ನಿನ್ನೆ ಕೇಂದ್ರ ಸರ್ಕಾರದ ಕ್ಯಾಬಿನೆಟ್ ಸಬ್ ಕಮಿಟಿ ಸಭೆ ಮಾಡಿದೆ. ಆದರೆ ಯಾವುದೇ ಮಾಹಿತಿ ಕೊಟ್ಟಿಲ್ಲ. ಯುದ್ಧ ಇನ್ನು ಒಂದು ವಾರ ಮುಂದುವರೆಯುವ ಮಾಹಿತಿ ಇದೆ. ಹೀಗಾಗಿ ಯಾರು ಆತಂಕಕ್ಕೆ ಒಳಗಾಗೋದು ಬೇಡ. ರಾಜ್ಯ ಸರ್ಕಾರ ಸಂಪೂರ್ಣ ಸಹಕಾರ ಕೊಡಲಿದೆ. ಅಲ್ಲಿವರೆಗೂ ಎಲ್ಲರು ಶಾಂತಿಯಿಂದ ಇರಬೇಕು ಎಂದು ಮನವಿ ಮಾಡಿದರು.

ಮಧ್ಯಪ್ರಾಚ್ಯ ಭಾಗದಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರು ಸ್ಥಳೀಯ ರಾಯಭಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಂಡು ಸ್ಥಳೀಯ ಆಡಳಿತ ಕೊಡುವ ನಿಯಮ ಪಾಲನೆ ಮಾಡಬೇಕು ಎಂದು ತಿಳಿಸಿದರು. ಶನಿವಾರದಿಂದಲೇ ಸಹಾಯವಾಣಿ ಪ್ರಾರಂಭ ಮಾಡಲಾಗಿದೆ. ಈವರೆಗೂ 109 ಜನ ಸಹಾಯವಾಣಿಗೆ ಕರೆ ಮಾಡಿದ್ದಾರೆ.

**ಯುಎಇ (ದುಬೈ) ಪಟ್ಟಿ:**
**ಬಳ್ಳಾರಿ: 32**
**ಬೆಂಗಳೂರು: 25**
**ದಾವಣಗೆರೆ: 9**
**ಚಿಕ್ಕಮಗಳೂರು: 5**
**ಕೊಡಗು, ವಿಜಯಪುರ: ತಲಾ 4**
**ದಕ್ಷಿಣ ಕನ್ನಡ, ಶಿವಮೊಗ್ಗ,**
**ರಾಯಚೂರು: ತಲಾ 3**
**ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕಲಬುರಗಿ,**
**ಉಡುಪಿ: ತಲಾ 2**
**ತುಮಕೂರು: 1**
**ಜಿಲ್ಲೆ ಸ್ಪಷ್ಟವಿಲ್ಲದವರು: 3**
**ಬಹ್ರೇನ್ ಪಟ್ಟಿ:**
**ಹಾಸನ: 4**
**ಉಡುಪಿ: 3**
**ಕೊಡಗು: 1**
**ಜಿಲ್ಲೆ ತಿಳಿಯದವರು: 1**

ಈಗಾಗಲೇ ವಿದೇಶಾಂಗ ಇಲಾಖೆ ಮತ್ತು ದೆಹಲಿಯಲ್ಲಿರೋ ನಮ್ಮ ರೆಸಿಡೆಂಟ್ ಕಮೀಷನರ್ ಕೂಡ ಕೇಂದ್ರದ ಜೊತೆ ಸಂಪರ್ಕದಲ್ಲಿ ಇದ್ದಾರೆ ಎಂದು ಅವರು ಮಧ್ಯಪ್ರಾಚ್ಯದಲ್ಲಿ ಸಿಲುಕಿರುವವರಿಗೆ 3 ವಿಷಯಗಳ ಬಗ್ಗೆ ಆತಂಕ ಇದೆ. ನಮ್ಮನ್ನು ಹೇಗೆ ವಾಪಸ್ ಕರೆಸುತ್ತೀರಾ ವಿಶೇಷ ವಿಮಾನದ ಮೂಲಕನಾ ಹೇಗೆ ಅಂತ. ನಾವು ಕೇಂದ್ರದ ಜೊತೆ ಮಾತಾಡ್ತಾ ಇದ್ದೇವೆ. ಸದ್ಯ ಈಗ ಏರ್ ಟ್ರಾಫಿಕ್ ನಿಷೇಧ ಆಗಿದೆ. ಏರ್ ಟ್ರಾಫಿಕ್ ಕ್ಲಿಯರ್ ಆದ ಕೂಡಲೇ ಕೇಂದ್ರ ಸರ್ಕಾರ ಹೇಗೆ ಕರೆಸಿಕೊಳ್ಳುತ್ತದೆ ನಮಗೆ ಮಾಹಿತಿ ಸಿಗುತ್ತದೆ. ವಾಯು ಸಂಚಾರ ನಿಯಂತ್ರಣಕ್ಕೆ ಬರುವತನಕ ತೆರವು ಕೆಲಸ ಆಗೊಲ್ಲ. ಹೀಗಾಗಿ ಎಲ್ಲರೂ ಶಾಂತವಾಗಿ ಇರಬೇಕು ಎಂದು ಮನವಿ ಮಾಡಿದರು. ಕದನ ವಿರಾಮ ಆದ ಕೂಡಲೇ ವಾಪಸ್ ಕರೆಸಲು ಕ್ರಮ ಆಗುತ್ತದೆ ಎಂದರು ಯುಎಇ (ದುಬೈ) ಮತ್ತು ಬಹ್ರೇನ್‌ನಲ್ಲಿ ಕನ್ನಡಿಗರು ಸಿಲುಕಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಒಟ್ಟು 109 ಕನ್ನಡಿಗರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಜಿಲ್ಲಾವಾರು ಸಿಲುಕಿರುವವರ ವಿವರ : ಸರ್ಕಾರ ಬಿಡುಗಡೆ ಮಾಡಿರುವ ಮಾಹಿತಿಯಂತೆ, ಯುಎಇ (ದುಬೈ) ನಲ್ಲಿ 100 ಮಂದಿ ಹಾಗೂ ಬಹ್ರೇನ್‌ನಲ್ಲಿ 9 ಮಂದಿ ಕನ್ನಡಿಗರು ನೆರವಿಗಾಗಿ ಕಾಯುತ್ತಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಸೆರಾಮಿಕ್ ಇಂಜಿನಿಯರಿಂಗ್

ಸೆರಾಮಿಕ್ ಇಂಜಿನಿಯರಿಂಗ್ (Ceramic Engineering) ಎಂಬುದು ಲೋಹವಲ್ಲದ ಅಥವಾ ಅಜೈವಿಕ (Inorganic) ವಸ್ತುಗಳಿಂದ ಉಪಯುಕ್ತ ಉತ್ಪನ್ನಗಳನ್ನು ತಯಾರಿಸುವ ಪ್ರಕ್ರಿಯೆಯೊಂದಿಗೆ ಸಂಬಂಧಿಸಿದ ಇಂಜಿನಿಯರಿಂಗ್ ವಿಶೇಷ ವಿಭಾಗವಾಗಿದೆ. ಈ ಪಠ್ಯಕ್ರಮದಲ್ಲಿ ಈ ವಸ್ತುಗಳ ವೈಜ್ಞಾನಿಕ ಜ್ಞಾನ, ತಾಂತ್ರಿಕ ಅನ್ವಯಗಳು, ಅವುಗಳ ಕಠಿಣತೆ, ಉಷ್ಣ ತಾಳುವ ಸಾಮರ್ಥ್ಯ ಮತ್ತು ವಿದ್ಯುತ್ ಗುಣಲಕ್ಷಣಗಳ ಅಧ್ಯಯನ ಒಳಗೊಂಡಿರುತ್ತದೆ. ಈ ವಿಶೇಷ ವಿಭಾಗದಲ್ಲಿ ಜನಪ್ರಿಯ ಕೋರ್ಸ್‌ಗಳು ಗಉ ಮಟ್ಟದಲ್ಲಿ BTech/BE ಇನ್ ಸೆರಾಮಿಕ್ ಇಂಜಿನಿಯರಿಂಗ್ ಮತ್ತು ಕಉ ಮಟ್ಟದಲ್ಲಿ MTech/ME ಇನ್ ಸೆರಾಮಿಕ್ ಇಂಜಿನಿಯರಿಂಗ್ ಆಗಿವೆ. ಅರ್ಹತೆ ಮತ್ತು ಪ್ರವೇಶ ಪ್ರಕ್ರಿಯೆ ಕಾಲೇಜು ಹಾಗೂ ಕೋರ್ಸ್ ಮಟ್ಟದ ಪ್ರಕಾರ ಬದಲಾಗುತ್ತದೆ. ಕಾಲೇಜುಗಳು ಮೆರುಗು (Merit) ಮತ್ತು ಪ್ರವೇಶ ಪರೀಕ್ಷೆಯ ಅಂಕಗಳ ಆಧಾರದ ಮೇಲೆ ಪ್ರವೇಶ ನೀಡುತ್ತವೆ.(Ceramic Engineering) ಅಜೈವಿಕ ಮತ್ತು ಲೋಹವಲ್ಲದ ವಸ್ತುಗಳ (ಮಣ್ಣುಗಾಜುಸಿಮೆಂಟ್) ವಿನ್ಯಾಸಉತ್ಪಾದನೆ ಮತ್ತು ಅನ್ವಯಿಕೆಯನ್ನು ಅಧ್ಯಯನ ಮಾಡುವ 4 ವರ್ಷಗಳ (B.Tech/B.E.) ತಾಂತ್ರಿಕ ಕೋರ್ಸ್ ಆಗಿದೆ. ಇದು ಶಾಖ ನಿರೋಧಕ ವಸ್ತುಗಳ ತಯಾರಿಕೆಏರೋಸ್ಪೇಸ್-ಎಲೆಕ್ಟ್ರಾನಿಕ್ಸ್ಮತ್ತು ಆರೋಗ್ಯ ಸೇವೆಗಳಂತಹ ಕೈಗಾರಿಕೆಗಳಲ್ಲಿ ಹೆಚ್ಚಿನ ಬೇಡಿಕೆಯಿರುವ ವೃತ್ತಿಪರ ಕ್ಷೇತ್ರವಾಗಿದೆ. ಸೆರಾಮಿಕ್ ಇಂಜಿನಿಯರಿಂಗ್ ಅನ್ವಯಗಳು ತಯಾರಿಕಾ, ಏರೋಸ್ಪೇಸ್, ವೈದ್ಯಕೀಯ, ನಿರ್ಮಾಣ ಮತ್ತು ಎಲೆಕ್ಟ್ರಾನಿಕ್ಸ್ ಉದ್ಯಮಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತವೆ. ಈ ವಿಭಾಗದಲ್ಲಿ ಪದವಿ ಪೂರ್ಣಗೊಳಿಸಿದ ನಂತರ ನೀವು ಪಾಲಿಮರ್ ರಸಾಯನಶಾಸ್ತ್ರಜ್ಞ (Polymer Chemist), ಸೆರಾಮಿಕ್ ತಂತ್ರಜ್ಞ (Ceramic Technologist), ಸೆರಾಮಿಕ್ ಸಂಶೋಧನಾ ಇಂಜಿನಿಯರ್ (Ceramic Research Engineer), ಮತ್ತು ಸೆರಾಮಿಕ್ ವಿನ್ಯಾಸಕ (Ceramic Designer) ಹುದ್ದೆಗಳಲ್ಲಿ ಕೆಲಸ ಮಾಡಬಹುದು. ಸೆರಾಮಿಕ್ ಇಂಜಿನಿಯರಿಂಗ್ ಕೋರ್ಸ್ ವಿವರಗಳು: ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು). ಅರ್ಹತೆ: 10+2 (ಪಿ.ಯು.ಸಿ) ವಿಜ್ಞಾನ ವಿಭಾಗದಲ್ಲಿ (ಭೌತಶಾಸ್ತ್ರರಸಾಯನಶಾಸ್ತ್ರ ಮತ್ತು ಗಣಿತ - PCM) ಉತ್ತೀರ್ಣರಾಗಿರಬೇಕು. ಪ್ರವೇಶ ಪರೀಕ್ಷೆಗಳು: JEE Main, JEE Advanced (IITUÀ½UÉ) ಮತ್ತು ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆಗಳು (ಉದಾಹರಣೆಗೆ KCET). ಮುಖ್ಯ ವಿಷಯಗಳು: ಮೆಟೀರಿಯಲ್ ಸೈನ್ಸ್ಸೆರಾಮಿಕ್ ಪ್ರೊಸೆಸಿಂಗ್ಫೇಸ್ ಇಕ್ವಿಲಿಬ್ರಿಯಾಗ್ಲಾಸ್ ಟೆಕ್ನಾಲಜಿರಿಫ್ರಾಕ್ಟರೀಸ್ಮತ್ತು ಎಲೆಕ್ಟ್ರಾನಿಕ್ ಸೆರಾಮಿಕ್ಸ್. ಉದ್ಯೋಗಾವಕಾಶಗಳು: ಸೆರಾಮಿಕ್ ಇಂಜಿನಿಯರ್ಪ್ರೊಡಕ್ಷನ್ ಮ್ಯಾನೇಜರ್ಸಂಶೋಧಕ (Researcher) ಮತ್ತು ಮೆಟೀರಿಯಲ್ ಸೈಂಟಿಸ್ಟ್ ಆಗಿ ಗಣಿಗಾರಿಕೆರಕ್ಷಣಾಮತ್ತು ಉತ್ಪಾದನಾ ಕೈಗಾರಿಕೆಗಳಲ್ಲಿ ಕೆಲಸ ಮಾಡಬಹುದು. ಕೋರ್ಸ್ ನಂತರದ ಅವಕಾಶಗಳು: B.Tech in Ceramic Engineering ಪದವಿಯ ನಂತರವಿದ್ಯಾರ್ಥಿಗಳು ಎಂ.ಟೆಕ್ (M.Tech) ಅಥವಾ ಪಿಹೆಚ್‌ಡಿ (PhD) ಮೂಲಕ ಉನ್ನತ ಶಿಕ್ಷಣ ಪಡೆಯಬಹುದು.

1ನೇ ಪುಟದಿಂದ....

ಮತ್ತೊಂದೆಡೆ ಚಿಕ್ಕಮಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡು ದಿನಗಳ ಹಿಂದೆ ದುಬೈ ಹಾಗೂ ಇತರ ಮಧ್ಯ ಪ್ರಾಚ್ಯ ರಾಷ್ಟ್ರದಲ್ಲಿ ನೆಲೆಸಿದ್ದ ವಿದೇಶಿ ಪ್ರಜೆಗಳಿಗೆ ಎಚ್ಚರಿಕೆಯ ಸಂದೇಶ ರವಾನಿಸಿದ್ದಾಗಿ ತಿಳಿದು ಬಂದಿದೆ. ಏನೇ ಆದರೂ ಶಾಂತಿ ಪಾಲನೆ ಮುಖ್ಯ. ಯಾರ ಆಸ್ತಿಗೂ ಹಾನಿಯಾಗಬಾರದು. ಕನ್ನಡಿಗರೂ ಸೇರಿದಂತೆ ಎಲ್ಲಾ ಭಾರತೀಯರನ್ನು ಸುರಕ್ಷಿತವಾಗಿ ಕರೆ ತರಬೇಕಿದೆ ಎಂದು ಹೇಳಿದರು. ಯುದ್ಧ ನಿಲ್ಲಿಸಲು ಕೇಂದ್ರ ಸರ್ಕಾರ ಅಮೇರಿಕಾದ ಮೇಲೆ ಒತ್ತಡ ಹೇರಬೇಕು. ಈ ಸಂಘರ್ಷದಿಂದಾಗಿ ವಿಶ್ವದ ಅರ್ಧ ಭಾಗಕ್ಕೆ ಸಂಪರ್ಕವೇ ಕಡಿತಗೊಂಡಂತಾಗಿದೆ. ಭಾರತಕ್ಕೆ ದುಬೈ ಹಾಗೂ ಸಿಂಗಾಪೂರದ ಮೂಲಕ ಬೇರೆ ಬೇರೆ ದೇಶಗಳಿಗೆ ವಿಮಾನ ಪ್ರಯಾಣಿಸುತ್ತಿದ್ದವು ಈಗ ಎಲ್ಲವೂ ಸ್ಥಗಿತವಾಗಿವೆ ಎಂದರು. ದಕ್ಷಿಣ ಭಾರತದಲ್ಲಿ ಅದರಲ್ಲೂ ಮಂಗಳೂರಿನಲ್ಲಿ ಕುಟುಂಬಕ್ಕೆ ಒಬ್ಬರಂತೆ ದುಬೈನಲ್ಲಿದ್ದು, ಕೆಲಸ ಮಾಡುತ್ತಿದ್ದಾರೆ. ಸೌದಿ ಅರೇಬಿಯಾ ಇಂದು ಅಭಿವೃದ್ಧಿಯಾಗಲು ಭಾರತೀಯ ಕೆಲಸಗಾರರೇ ಕಾರಣ. ಈ ಯುದ್ಧದಿಂದ ಭಾರತಕ್ಕೆ ಗಂಡಾತರವಾಗಲಿದೆ ಎಂದರು.

# ಇರಾನ್ ಮೇಲೆ ದಾಳಿ :ಷೇರು ಮಾರುಕಟ್ಟೆಗೆ ಅಪ್ಪಳಿಸಿದ ಸುನಾಮಿ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಮಧ್ಯಪ್ರಾಚ್ಯದಲ್ಲಿ ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸಿರುವ ಭೀಕರ ದಾಳಿಯು ಭಾರತೀಯ ಷೇರು ಮಾರುಕಟ್ಟೆಯ ಮೇಲೆ ಸುನಾಮಿಯಂತೆ ಅಪ್ಪಳಿಸಿದೆ.**




ಇಂದು ಮಾರುಕಟ್ಟೆ ಆರಂಭವಾದ ಕೆಲವೇ ನಿಮಿಷಗಳಲ್ಲಿ ಹೂಡಿಕೆದಾರರ ಸುಮಾರು 7.8 ಲಕ್ಷ ಕೋಟಿ ರೂಪಾಯಿ ಸಂಪತ್ತು ಧೂಳಿಪಟವಾಗಿದೆ. ಇರಾನ್‌ನ ಸುಪ್ರೀಂ ಲೀಡರ್ ಮೃತಪಟ್ಟಿದ್ದಾರೆ ಎಂಬ ವರದಿಗಳು ಹೂಡಿಕೆದಾರರಲ್ಲಿ ಭೀತಿ ಮೂಡಿಸಿದ್ದು, ಎಲ್ಲೆಡೆ ಷೇರುಗಳ ಮಾರಾಟದ ಅಬ್ಬರ ಕಂಡುಬಂದಿದೆ. ಸೆನ್ಸೆಕ್ಸ್ ಮತ್ತು ನಿಫ್ಟಿ ಪಾತಾಳಕ್ಕೆ : ಮುಂಬೈ ಷೇರು ಮಾರಕಟ್ಟೆಯಲ್ಲಿ ಸೆನ್ಸೆಕ್ಸ್ 1,100 ಪಾಯಿಂಟ್ಸ್ ಕುಸಿತ ಕಂಡರೆ, ನಿಫ್ಟಿ 350 ಪಾಯಿಂಟ್ಸ್ ಕುಸಿದು 24,800 ಮಟ್ಟಕ್ಕೆ ತಲುಪಿದೆ. ತೈಲ ಬೆಲೆ ಏರಿಕೆ : ಯುದ್ಧದ ಹಿನ್ನೆಲೆಯಲ್ಲಿ ಬ್ರೆಂಟ್ ಕ್ರೂಡ್ ಆಯಿಲ್ ಬೆಲೆ ಪ್ರತಿ ಬ್ಯಾರೆಲ್‌ಗೆ 77 ಡಾಲರ್ ದಾಟಿದ್ದು, ಇದು ಭಾರತದ ಆರ್ಥಿಕತೆಗೆ ದೊಡ್ಡ ಹೊಡೆತ ನೀಡಿದೆ.

ರೂಪಾಯಿ ಮೌಲ್ಯ ಕುಸಿತ : ಅಮೆರಿಕನ್ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯವು ಸಾರ್ವಕಾಲಿಕ ಕುಸಿತ ಕಂಡು 91.23ಕ್ಕೆ ತಲುಪಿದೆ. ಹೂಡಿಕೆದಾರರಿಗೆ ಈಗಿರುವ ಆಯ್ಕೆಗಳೇನು ಮಾರುಕಟ್ಟೆಯಲ್ಲಿ ಇಂತಹ ಅನಿಶ್ಚಿತತೆ ಇರುವಾಗ ಹೂಡಿಕೆದಾರ ರು ಗಾಬರಿಯಾಗದೆ ಈ ಕೆಳಗಿನ 'ಸುರಕ್ಷಿತ' ವಲಯಗಳತ್ತ ಗಮನ ಹರಿಸಬಹುದು ಎಂದು ತಜ್ಞರು ಸಲಹೆ ನೀಡಿದ್ದಾರೆ : ಚಿನ್ನ ಸುರಕ್ಷಿತ ಹೂಡಿಕೆ: ಯುದ್ಧದ ಸಮಯದಲ್ಲಿ ಚಿನ್ನವು ಯಾವಾಗಲೂ ಅತ್ಯಂತ ಸುರಕ್ಷಿತ ಹೂಡಿಕೆಯಾಗಿ ಹೊರಹೊಮ್ಮುತ್ತದೆ. ಈಗಾಗಲೇ ಚಿನ್ನದ ಬೆಲೆ ಏರಿಕೆಯಾಗುತ್ತಿದ್ದು, ನಿಮ್ಮ ಪೋರ್ಟ್‌ಫೋಲಿಯೋ ರಕ್ಷಣೆಗೆ ಇದು ಉತ್ತಮ ಆಯ್ಕೆ.

ರಕ್ಷಣಾ ಮತ್ತು ಇಂಧನ ವಲಯ : ರಕ್ಷಣಾ ಇಲಾಖೆಗೆ ಸಂಬಂಧಿಸಿ ದ ಕಂಪನಿಗಳು ಮತ್ತು ತೈಲ ಉತ್ಪಾದನಾ ಕಂಪನಿಗಳ ಷೇರುಗಳು ಲಾಭ ತರುವ ಸಾಧ್ಯತೆಯಿದೆ.

ಡಿಫೆನ್ಸಿವ್ ಸ್ಟಾಕ್ಸ್ : ಐಟಿ ಮತ್ತು ಫಾರ್ಮಾ ವಲಯಗಳು ತೈಲ ಬೆಲೆ ಏರಿಕೆಯಿಂದ ನೇರವಾಗಿ ಬಾಧಿತವಾಗುವುದಿಲ್ಲ, ಆದ್ದರಿಂದ ಇವುಗಳನ್ನು ರಕ್ಷಣಾತ್ಮಕ ಷೇರುಗಳಾಗಿ ಪರಿಗಣಿಸಬಹುದು. ಬ್ಲೂ-ಚಿಪ್ ಷೇರುಗಳ ಖರೀದಿ : ಬಲಿಷ್ಠ ತಳಹದಿ ಹೊಂದಿರುವ ದೊಡ್ಡ ಕಂಪನಿಗಳ ಷೇರುಗಳು ಈಗ ಕಡಿಮೆ ಬೆಲೆಗೆ ಸಿಗುತ್ತಿವೆ. ದೀರ್ಘಾವಧಿ ಹೂಡಿಕೆದಾರರಿಗೆ ಇದು ಹಂತಹಂತವಾಗಿ ಖರೀದಿಸಲು ಸುವರ್ಣಾವಕಾಶ.

ತಜ್ಞರ ಎಚ್ಚರಿಕೆ: "ಮಾರುಕಟ್ಟೆಯಲ್ಲಿ ಸದ್ಯಕ್ಕೆ ಭಾರಿ ಏರಿಳಿತ ಇರುವುದರಿಂದ ಹೂಡಿಕೆದಾರರು ದೊಡ್ಡ ಮೊತ್ತದ ಹಣವನ್ನು ಒಂದೇ ಬಾರಿಗೆ ಹೂಡಿಕೆ ಮಾಡಬಾರದು. ಪರಿಸ್ಥಿತಿ ತಿಳಿಯಾಗುವವರೆಗೆ ಕಾಯುವುದು ಅಥವಾ ಎಸ್‌ಐಪಿ ಮಾದರಿಯಲ್ಲಿ ಹೂಡಿಕೆ ಮುಂದುವರಿಸುವುದು ಉತ್ತಮ" ಎಂದು ಮಾರುಕಟ್ಟೆ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

# ನುಡಿದಂತೆ ನಡೆದ ಜಿಲ್ಲಾಡಳಿತ : ಮೆದುಳು ಕ್ಯಾನ್ಸರ್ ಬಾಲಕಿಗೆ ಆಧಾರ್ ಮತ್ತು ಬಿಪಿಎಲ್ ಕಾರ್ಡ್

ನೈಜ್ಯ ದೆಸೆ ನ್ಯೂಸ್

**ತುಮಕೂರು: ಆಧಾರ್ ಕಾರ್ಡ್ ತಿದ್ದುಪಡಿ ತಾಂತ್ರಿಕ ಸಮಸ್ಯೆಯಿಂದ ಪರದಾಡಿದ್ದ ಮೆದುಳು ಕ್ಯಾನ್ಸರ್ ಪೀಡಿತ ಯೋಗಿತಾ ಎಂಬ ಬಾಲಕಿಯ ಚಿಂತಾಜನಕ ಸ್ಥಿತಿಗೆ ಸ್ಪಂದಿಸಿದ ಜಿಲ್ಲಾಡಳಿತ ಕೊಟ್ಟ ಮಾತಿನಂತೆ ನಾಲ್ಕು ದಿನದಲ್ಲಿ ಆಧಾರ್ ಕಾರ್ಡ್ ತಿದ್ದುಪಡಿ ಹಾಗೂ ಬಿಪಿಎಲ್ ಕಾರ್ಡ್ ಗೆ ಬಾಲಕಿ ಹೆಸರು ಸೇರ್ಪಡೆ ಮಾಡಿ ಜಿಲ್ಲಾ ಮಂತ್ರಿ ಗೃಹ ಸಚಿವ ಡಾ.ಜಿ ಪರಮೇಶ್ವರ್ ಅವರ ಹಸ್ತದಿಂದ ಬಾಲಕಿಯ ಕುಟುಂಬಕ್ಕೆ ವಿತರಣೆ ಮಾಡಿದರು.**




ಕಳೆದ ವಾರದಲ್ಲಿ ಮೆದುಳು ಕ್ಯಾನ್ಸರ್ ಕಾಯಿಲೆಗೆ ತುತ್ತಾದ ಗುಬ್ಬಿ ಪಟ್ಟಣದ ಸಮೀಪದ ಜಿ.ಹರಿವೇಸಂದ್ರ ಗ್ರಾಮದ ಮಂಜುನಾಥ್ ನೇತ್ರಾವತಿ ದಂಪತಿಯ ಹತ್ತು ವರ್ಷದ ಮಗಳು ಯೋಗಿತಾ ಐದು ತಿಂಗಳ ಹಿಂದೆ ಜ್ವರದಿಂದ ಬಳಲಿ ನಂತರ ಕೈ ಕಾಲು ಸ್ವಾಧೀನ ಇಲ್ಲದಂತಾಗಿ ನಿಮ್ಹಾನ್ಸ್ ಆಸ್ಪತ್ರೆಗೆ ತೆರಳಿದಾಗ ಮೆದುಳು ಕ್ಯಾನ್ಸರ್ ನಾಲ್ಕನೇ ಹಂತದಲ್ಲಿದ್ದ ವಿಚಾರ ತಿಳಿದು ಆಘಾತಕ್ಕೆ ಒಳಗಾಗಿದ್ದರು. ಬಡ ಕುಟುಂಬ ಮಗಳ ಚಿಕಿತ್ಸೆಗೆ ತೆರಳಿದಾಗ ಬಾಲಕಿಯ ಆಧಾರ್ ಕಾರ್ಡ್ ಸರಿ ಇಲ್ಲದ ಬಗ್ಗೆ ತಿಳಿದು ತಿದ್ದುಪಡಿಗೆ ನಿರಂತರ ಪ್ರಯತ್ನ ಪಟ್ಟಿದ್ದರೂ ಪ್ರಯೋಜನ ಆಗಿರಲಿಲ್ಲ.

ಈ ವಿಷಯ ಮಾಧ್ಯಮಗಳು ವರದಿ ಮಾಡಿದ ಬೆನ್ನಲ್ಲೇ ಸ್ಪಂದಿಸಿದ ಜಿಲ್ಲಾಡಳಿತ ಉಪವಿಭಾಗಾಧಿಕಾರಿಗಳು ಬಾಲಕಿಯ ಮನೆಗೆ ಸಿಬ್ಬಂದಿಗಳ ಜೊತೆ ಬಂದು ಆಧಾರ್ ಕಾರ್ಡ್ ತಿದ್ದುಪಡಿ ಮಾಡಿಸುವಲ್ಲಿ ಯಶಸ್ವಿಯಾದರು. ನಂತರ ಬಿಪಿಎಲ್ ಕಾರ್ಡ್ ಗೆ ಬಾಲಕಿ ಹೆಸರು ಸೇರ್ಪಡೆ ಮಾಡಿದ ತಾಲ್ಲೂಕು ಆಡಳಿತ ಪಡಿತರ ಚೀಟಿ ಸಿದ್ಧಪಡಿಸಿ ಜಿಲ್ಲಾ ಮಂತ್ರಿ ಹಾಗೂ ಜಿಲ್ಲಾಧಿಕಾರಿಗಳ ಮೂಲಕ ಸಂತ್ರಸ್ತ ಕುಟುಂಬಕ್ಕೆ ಹಸ್ತಾಂತರ ಮಾಡಿದರು.

# ಯುದ್ಧ ನಿಲ್ಲಿಸಲು ನೆತನ್ಯಾಹುಗೆ ಮೋದಿ ಮನವಿ



ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಜಂಟಿ ದಾಳಿಯ ನಂತರ ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಹೆಚ್ಚಿರುವ ನಡುವೆ ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ದೂರವಾಣಿ ಕರೆ ಮಾಡಿ, ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.**

ಸಂಭಾಷಣೆಯಲ್ಲಿ ನಾಗರಿಕರ ಸುರಕ್ಷತೆಯ ಬಗ್ಗೆ ಒತ್ತಿ ಹೇಳಿ, ಯುದ್ಧವನ್ನು ಆದಷ್ಟು ಬೇಗ ನಿಲ್ಲಿಸುವಂತೆ ಮನವಿ ಮಾಡಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ , "ಸದ್ಯದ ಪ್ರಾದೇಶಿಕ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ದೂರವಾಣಿ ಕರೆ ಮಾಡಿ ಮಾತನಾಡಿದ್ದೇನೆ. ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿ, ಜನರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವಂತೆ, ಜೊತೆಗೆ ಬೇಗನೇ ಯುದ್ಧ ನಿಲ್ಲಿಸುವಂತೆ ಮನವಿ ಮಾಡಿದೆ" ಎಂದು ಹೇಳಿದ್ದಾರೆ

ಅಮೆರಿಕ, ಇಸ್ರೇಲ್ ಮತ್ತು ಇರಾನ್ ಮಧ್ಯದ ಯುದ್ಧದಿಂದಾಗಿ ಭೌಗೋಳಿಕ ರಾಜಕೀಯ ಅನಿಶ್ಚಿತತೆ ಮತ್ತು ಜಾಗತಿಕ ಭದ್ರತಾ ಆತಂಕ ಮೂಡಿರುವ ಮಧ್ಯೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬೆಂಜಮಿನ್ ನೆತನ್ಯಾಹು ಸಂಭಾಷಣೆ ನಡೆದಿದೆ. ಸ್ಥಿರತೆ ಪುನಃಸ್ಥಾಪಿಸಲು ನಿರಂತರವಾಗಿ ಸಂಯಮ, ಸಂವಾದ ಮತ್ತು ರಾಜತಾಂತ್ರಿಕತೆಗೆ ಭಾರತ ಕರೆ ನೀಡಿದೆ. ರಾಜಸ್ಥಾನ, ಗುಜರಾತ್, ತಮಿಳುನಾಡು ಮತ್ತು ಪುದುಚೇರಿಗಳ ಎರಡು ದಿನಗಳ ಪ್ರವಾಸದಿಂದ ಹಿಂದಿರುಗಿದ ನಂತರ ಪ್ರಧಾನಿ ಮೋದಿ ಅವರು ನವದೆಹಲಿಯಲ್ಲಿ ಉನ್ನತ ಮಟ್ಟದ ಸಭೆ ನಸಿದರು.


ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ವಿದೇಶಾಂಗ ಸಚಿವ ಎಸ್.ಜೈಶಂಕರ್, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಸೇರಿದಂತೆ ಹಿರಿಯ ಸಚಿವರು ಮತ್ತು ಉನ್ನತ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಅಮೆರಿಕ ಇಸ್ರೇಲ್ ದಾಳಿಗೆ ಪ್ರತೀಕಾರವಾಗಿ ಗಲ್ಫ್ ರಾಷ್ಟ್ರದ ಮೇಲಿನ ಇರಾನ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ. ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರಿಗೆ ಭಾನುವಾರ ರಾತ್ರಿ ಕರೆ ಮಾಡಿ, ಸಂಕಷ್ಟದ ಸಮಯದಲ್ಲಿ ನಿಮ್ಮೊಂದಿಗೆ ಭಾರತ ನಿಲ್ಲಲಿದೆ ಎಂದು ತಿಳಿಸಿದ್ದಾರೆ.

# ದಾಳಿ ಪ್ರತಿ ದಾಳಿ ಮಧ್ಯಪ್ರಾಚ್ಯ ತತ್ತರ

ನೈಜ್ಯ ದೆಸೆ ನ್ಯೂಸ್

**ಟೆಲ್ ಅವಿವ್/ಬೈರೂತ್: ಆಪರೇಷನ್ 'ರೋರಿಂಗ್ ಲಯನ್' ಭಾಗವಾಗಿ ಇಸ್ರೇಲ್ ರಕ್ಷಣಾ ಪಡೆಗಳು ನಡೆಸುತ್ತಿರುವ ದಾಳಿಯನ್ನು ಮತ್ತಷ್ಟು ತೀವ್ರಗೊಂಡಿದ್ದು ದಾಳಿಯಲ್ಲಿ ಇರಾನಿನ ಕನಿಷ್ಠ 31 ಮಂದಿ ಸಾವನ್ನಪ್ಪಿದ್ದಾರೆ. ಈ ದಾಳಿಗೆ ತಿರುಗೇಟು ನೀಡಿರುವ ಇರಾನ್ ನಡೆಸಿದ ಪ್ರತಿ ದಾಳಿಯಲ್ಲಿ 9 ಮಂದಿ ಮೃತಪಟ್ಟಿದ್ದಾರೆ.**



ಇರಾನ್ ಬೆಂಬಲಿತ ಹಿಜ್ಬುಲ್ಲಾ ಸಂಘಟನೆಯನ್ನು ಗುರಿಯಾಗಿಸಿ ಲೆಬನಾನ್ ರಾಜಧಾನಿ ಬೈರೂತ್ ಮೇಲೆ ಇಸ್ರೇಲ್ ದಾಳಿ ನಡೆಸಿದ್ದು ಸಾವು ನೋವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾದ್ಯತೆಗಳಿವೆ ಎನ್ನಲಾಗಿದೆ. ಹಿಜ್ಬುಲ್ಲಾ ನಡೆಸಿದ ಕ್ಷಿಪಣಿ ಮತ್ತು ಗುಂಡಿನ ದಾಳಿಗೆ ಪ್ರತಿಯಾಗಿ ಇಸ್ರೇಲ್ ಕೂಡ ಕ್ಷಿಪಣಿ ಮಳೆಗರೆದಿದೆ. ಹಿಜ್ಬುಲ್ಲಾ ನೆಲೆಗಳ ಮೇಲೆ ಇಸ್ರೇಲ್ ರಕ್ಷಣಾ ಪಡೆಗಳು ನಡೆಸಿದ ದಾಳಿಯಲ್ಲಿ 31 ಮಂದಿ ಸಾವನ್ನಪ್ಪಿದ್ದಾರೆ.

ಇಸ್ರೇಲ್ ಪಡೆಗಳು ಲೆಬನಾನ್ ರಾಜ್ಯವನ್ನ ನಾಶಪಡಿಸುತ್ತಿವೆ. ಯಾವುದೇ ಬೆದರಿಕೆಗಳನ್ನ ಎದುರಿಸಲು ನಾವು ಸಿದ್ಧರಿದ್ದೇವೆ ಎಂದು ಇಸ್ರೇಲ್ ಹೇಳಿದೆ. ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಆಲಿ ಖಮೇನಿ ಹತ್ಯೆಗೆ ಪ್ರತೀಕಾರವಾಗಿ ಇಸ್ರೇಲ್ ನಾಗರಿಕರನ್ನ ಗುರಿಯಾಗಿಸಿ ಹಿಬ್ಬುಲ್ಲಾ ಮಿಸೈಲ್ ಮತ್ತು ಗುಂಡಿನ ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಆಪರೇಷನ್ ' ' ಪ್ರಾರಂಭಿಸಿ ಲೆಬನಾನ್ ಸುತ್ತ ದಾಳಿ ನಡೆಸುತ್ತಿದೆ.

ನಾಗರಿಕರಿಗೆ ಎಚ್ಚರಿಕೆ : ದಾಳಿ ನಡೆಸುವುದಕ್ಕೆ ಮುನ್ನವೇ ಇಸ್ರೇಲ್ ಲೆಬನಾನ್ ನಾಗರಿಕರಿಗೆ ಎಚ್ಚರಿಕೆ ರವಾನಿಸಿತ್ತು. ಪೂರ್ವ ಮತ್ತು ದಕ್ಷಿಣ ಲೆಬನಾನ್‌ನ ಸುಮಾರು 50 ಹಳ್ಳಿಗಳ ಜನರನ್ನ ಸ್ಥಳಾಂತರಿಸುವಂತೆ ಇಸ್ರೇಲಿ ಸೇನೆ ಒತ್ತಾಯಿಸಿತ್ತು. ನಾಗರಿಕರು ತಮ್ಮ ಮನೆಗಳನ್ನ ತೆರವುಗೊಳಿಸಿ ಹಳ್ಳಿಗಳಿಂದ ಕನಿಷ್ಠ 1,000 ಮೀಟರ್ ದೂರದಲ್ಲಿರುವ ಸ್ಥಳಾಂತರಗೊಳ್ಳುವಂತೆ ಹೇಳಿತ್ತು ಎಂದು ಇಸ್ರೇಲ್ ಸೇನೆ ತಿಳಿಸಿದೆ.

9 ಸಾವು, 23 ಮಂದಿಗೆ ಗಾಯ : ಅಮೆರಿಕ ಹಾಗೂ ಇಸ್ರೇಲ್ ತನ್ನ ಮೇಲೆ ನಡೆಸುತ್ತಿರುವ ದಾಳಿಗೆ ಪ್ರತಿಯಾಗಿ ಇರಾನ್ ದಾಳಿ ನಡೆಸಿದ್ದು 9ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದು 23 ಕ್ಕೂ ಅಧಿಕ ಮಂದಿ ಗಾಯಗೊಂಡಿರುವ ಘಟನೆ ನಡೆದಿದೆ. ಇಸ್ರೇಲ್ ಕೇಂದ್ರ ಭಾಗದ ನಗರ ಬೆಟ್ ಶೆಮೆಷ್ ಮೇಲೆ ಇರಾನ್ ನಡೆಸಿದ ಕ್ಷಿಪಣಿಗಳ ದಾಳಿಯಲ್ಲಿ ಕನಿಷ್ಠ 9 ಮಂದಿ ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

'ಇರಾನ್ ಉಡಾಯಿಸಿದ ಕ್ಷಿಪಣಿಯೊಂದು ನಗರದ ಕಟ್ಟಡಕ್ಕೆ ಅಪ್ಪಳಿಸಿದೆ. ಈ ದಾಳಿಯಲ್ಲಿ, 9 ಜನರು ಸಾವಿಗೀಡಾಗಿ 23 ಮಂದಿ ಗಾಯಗೊಂಡಿದ್ದಾರೆ' ಎಂದು ತುರ್ತು ಸೇವೆ ಒದಗಿಸುವ ಸಂಸ್ಥೆ ಎಂಡಿಎ ಹೇಳಿದೆ.

ಕೊಲ್ಲಿ ರಾಷ್ಟ್ರಗಳ ವಿವಿಧ ನಗರಗಳನ್ನು ಗುರಿಯಾಗಿಸಿ ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಭಾರಿ ಪ್ರಮಾಣದಲ್ಲಿ ದಾಳಿ ನಡೆಸಿದೆ. ರಿಯಾದ್, ದುಬೈ, ಅಬುಧಾಬಿ, ದೋಹಾ, ಮನಾಮ, ಇಸ್ರೇಲ್‌ನ ಟೆಲ್ ಅವೀವ್ ಹಾಗೂ ಜೆರುಸಲೇಮ್ ನಗರಗಳ ಮೇಲೆ ಕ್ಷಿಪಣಿಗಳಿಂದ ದಾಳಿ ನಡೆಸಿದೆ. ಕೊಲ್ಲಿ ಹಾಗೂ ಇರಾಕ್‌ನ ಕುರ್ದಿಸ್ತಾನ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ದಾಳಿ ಮಾಡಿದ್ದಾಗಿ ಇರಾನ್ ಸೇನೆ ಹೇಳಿದೆ.

ಅಣ್ವಸ್ತ್ರ ಕಾರ್ಯಕ್ರಮ ವಿವಾದಕ್ಕೆ ಸಂಬಂಧಿಸಿ ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಗೆ ಒಮಾನ್ ಮಧ್ಯಸ್ಥಿಕೆ ವಹಿಸಿತ್ತು.ಪ್ರತಿದಾಳಿ ವೇಳೆ ಒಮಾನ್‌ಅನ್ನು ಕೂಡ ಇರಾನ್ ಪಡೆಗಳು ಗುರಿಯಾಗಿಸಿದ್ದವು.ಮತ್ತೆ ನಡೆದ ದಾಳಿಯಲ್ಲಿ ಒಮಾನ್‌ನ ದುಕಮ್ ಬಂದರು ಗುರಿಯಾಗಿಸಿ ಎರಡು ಡೋನ್‌ಗಳಿಂದ ದಾಳಿ ನಡೆಸಿತು. ಈ ಘಟನೆಯಲ್ಲಿ ಒಬ್ಬ ವಿದೇಶಿ ಕಾರ್ಮಿಕ ಮೃತಪಟ್ಟಿದ್ದಾಗಿ ಒಮಾನ್ ಸುದ್ದಿಸಂಸ್ಥೆ ವರದಿ ಮಾಡಿದೆ. 43 ಸೈನಿಕರ ಸಾವು : ಇರಾಕ್ ಗಡಿಗೆ ಹೊಂದಿಕೊಂಡ, ಇರಾನ್‌ನ ಮೆಹ್ರಾನ್ ನಗರದಲ್ಲಿರುವ ಗಡಿ ಭದ್ರತಾ ಪಡೆಯ ಕೇಂದ್ರ ಕಚೇರಿ ಮೇಲೆ ಅಮೆರಿಕ ಹಾಗೂ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ 43 ಸೈನಿಕರು ಮೃತಪಟ್ಟಿದ್ದಾರೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.

ಇಸ್ರೇಲ್ ಅನ್ನು ಗುರಿಯಾಗಿಸಿ ಎರಡು ಡ್ರೋನ್‌ಗಳಿಂದ ದಾಳಿ ನಡೆಸಿತು. ಈ ಘಟನೆಯಲ್ಲಿ ಒಬ್ಬ ವಿದೇಶಿ ಕಾರ್ಮಿಕ ಮೃತಪಟ್ಟಿದ್ದಾಗಿ ಒಮಾನ್ ಸುದ್ದಿಸಂಸ್ಥೆ ವರದಿ ಮಾಡಿದೆ. ಶೋಕ-ಸಂಭ್ರಮ : ಆಯತೊಲ್ಲಾ ಆಲಿ ಖಮೇನಿ ಅವರ ಹತ್ಯೆಗೆ ಇರಾನ್‌ನಲ್ಲಿ ಜನರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅವರ ಹತ್ಯೆ ಸುದ್ದಿ ತಿಳಿಯುತ್ತಲೇ, ಟೆಹರಾನ್‌ನಲ್ಲಿ ಕೆಲವೆಡೆ ಜನರು ಗುಂಪಾಗಿ ಜಮಾಯಿಸಿ, ಶೋಕ ವ್ಯಕ್ತ ಪಡಿಸಿದರು. ತಮ್ಮ ನಾಯಕನ ಹತ್ಯೆಗೆ ರೋಧಿಸಿದರು. ಟೆಹರಾನ್‌ನ ಕೆಲವಡೆ ಜನರು ಬೀದಿಗಳಿದು ಸಂಭ್ರಮಿಸಿದರು ಅಮೆರಿಕದ 560 ಸೈನಿಕರ ಸಾವು : ಅಮೆರಿಕದ ವಿರುದ್ಧ ಪ್ರತೀದಾಳಿ ನಡೆಸಿ ಅದರ ಮಿಲಿಟರಿ ನೆಲೆಗಳ ಮೇಲೆ ಎರಡು ಖಂಡಾಂತರ ಕ್ಷಿಪಣಿಗಳನ್ನು ಉಡಾಯಿಸಿಲಾಗಿದೆ. ದಾಳಿಗೆ ಅಮೆರಿಕದ 560 ಸೈನಿಕರು ಹತ್ಯೆಯಾಗಿದ್ದಾರೆ ಎಂದು ಇರಾನ್ ಹೇಳಿಗೊಂಡಿದೆ.

500ಕ್ಕೂ ಅಧಿಕ ಅಮೆರಿಕ ಸೈನಿಕರನ್ನು ಕೊಂದಿರುವುದಾಗಿ ಇರಾನ್ ಹೇಳಿಕೊಂಡಿದೆ. ಕುವೈತ್‌ನಲ್ಲಿರುವ ಅಮೆರಿಕ ನೆಲೆ ಸಂಪೂರ್ಣ ನಿಷ್ಕ್ರಿಯವಾಗಿದೆ. ಬಹ್ರೇನ್‌ನಲ್ಲಿರುವ ಅಮೆರಿಕದ ನೆಲೆಯ ಮೇಲೆ ಡ್ರೋನ್ ದಾಳಿಯಲ್ಲಿ ಭಾರಿ ಹಾನಿಯಾಗಿದೆ. ಅಮೆರಿಕದ ವಿಮಾನವಾಹಕ ನೌಕೆ ಅಬ್ರಹಾಂ ಲಿಂಕನ್ ಮೇಲೆ ನಾಲ್ಕು ಕ್ಷಿಪಣಿಗಳ ದಾಳಿ ನಡೆಸಲಾಯಿತು. ಎಲ್ಲ ದಾಳಿಗಳಲ್ಲಿ ಅಮೆರಿಕದ 560 ಮಂದಿ ಸೈನಿಕರು ಸಾವಿಗೀಡಾಗಿದ್ದಾರೆಂದು ಇರಾನ್ ತಿಳಿಸಿದೆ.